# ಅಲ್ಲಾಹು

ಇಮೇಜ್ ಎಜುಕೇಶನಲ್ ಟ್ರಸ್ಟ್ (ರಿ)

بسم الله الرحمن الرحيم

**ಪರಮ ದಯಾಮಯನೂ ಕರುಣಾಮಯಿಯೂ**
**ಆದ ಅಲ್ಲಾಹುವಿನ ನಾಮದಿಂದ**

# ಅಲ್ಲಾಹು

ALLAH THE CREATOR

**ಡಾ| ಎಂ. ಉಸ್ಮಾನ್**

ಅನುವಾದ:

**ಮುಹಮ್ಮದ್ ಹಂಝಾ ಪುತ್ತೂರು**

**ಬೆಲೆ ₹ 20.00**

**ಇಮೇಜ್ ಎಜುಕೇಶನಲ್ ಟ್ರಸ್ಟ್ (ರಿ)**

ALL RIGHTS RESERVED © جميع الحقوق محفوظة

no part of this book may be reproduced or transmitted in any form or by any means, electronic, mechanical, including photocopy, recording, or any information storage and retrieval system, without permission in writing from the publisher

First Edition: Feb 2012
Second Edition: Dec 2012

Title : Allahu
Author : Dr. M Usman
Translation : Muhammad Hamza Puttur
Printers : Pixel Printers & Designers, Mangalore
Copies : 2000
Price : 20.00

Typesetting & DTP :

IMAGE PUBLICATIONS
PUTTUR - 574 201

PUBLISHERS:

**IMAGE EDUCATIONAL TRUST(R)**

14-37 G(1), Vinayak Complex,

Kaikamba, B.C.Road, South Kanara Dist. 574219

*email: educateimage@gmail.com*

---

DISTRIBUTORS:

Manhaj-Al-Ambiya
Call & Guidance Centre

Mangalore - 575 001
*email: al.ambiya@gmail.com*
*dawathu-salafiyya@hotmail.com*

## ಒಳಪುಟಗಳಲ್ಲಿ....

| | |
|---|---|
| ಅಲ್ಲಾಹು | 7 |
| ಆರಾಧನೆಗೆ ನೈಜ ಹಕ್ಕುದಾರನು ಅಲ್ಲಾಹು ಮಾತ್ರವಾಗಿದ್ದಾನೆ | 9 |
| ವೈಚಾರಿಕತೆಗೆ ವಿರುದ್ಧವಾಗಿರುವ ನಾಸ್ತಿಕರ ವಾದ | 12 |
| ಪ್ರವಾದಿಗಳು ದೇವಾವತಾರಗಳಲ್ಲ | 15 |
| ಮಿಥ್ಯಕಲ್ಪನೆಗಳು | 18 |
| ಕುರ್‌ಆನ್ ಪರಿಚಯಿಸುವ ದೇವನು | 19 |
| ಸೃಷ್ಟಿಯಲ್ಲಿ ಲಯಗೊಂಡಿಲ್ಲ | 22 |
| ತಂದೆಯೂ ಅಲ್ಲ; ಮಗನೂ ಅಲ್ಲ | 23 |
| ಪರಮ ದಯಾಮಯ ಮತ್ತು ಕರುಣಾಮಯಿ | 26 |
| ಕರ್ಮಫಲ | 29 |
| ಇನ್ನು ನಾವು ಚಿಂತಿಸೋಣ | 30 |

# ಅಲ್ಲಾಹು

'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರನಾಗಿ ಅನ್ಯರಿಲ್ಲ) ಎಂಬುದು ಇಸ್ಲಾಮಿನ ಮೂಲಭೂತ ವಿಶ್ವಾಸವಾಗಿದೆ. ಇದು ಮನುಷ್ಯಾರಂಭದಿಂದಲೇ ಪ್ರವಾದಿಗಳೆಲ್ಲರೂ ತಮ್ಮ ಜನತೆಗೆ ಬೋಧಿಸಿದ ಮಹತ್ವಪೂರ್ಣವಾದ ವಚನವಾಗಿದೆ. ಈ ಮಹಾನ್ ತತ್ವವನ್ನು ಮತ್ತು ಅನಿಷೇಧ್ಯವಾದ ಯಾಥಾರ್ಥ್ಯವನ್ನು ಬಹುತೇಕ ಎಲ್ಲ ಧಾರ್ಮಿಕ ಗ್ರಂಥಗಳೂ ಜನರಿಗೆ ಕಲಿಸಿಕೊಡುತ್ತವೆ. ಪ್ರಾಚೀನ ಧಾರ್ಮಿಕ ಗ್ರಂಥಗಳು ಭಾರೀ ತಿದ್ದುಪಡಿಗಳಿಗೆ ವಿಧೇಯವಾಗಿದ್ದರೂ, ಪದೇ ಪದೇ ಹಸ್ತಕ್ಷೇಪಗಳಿಗೆ ಒಳಗಾಗಿದ್ದರೂ ಅವುಗಳನ್ನು ಸೂಕ್ಷ್ಮವಾಗಿ ಪರಿಶೋಧಿಸಿದರೆ ಈ ಸತ್ಯವನ್ನು ಇಂದಿಗೂ ನಮಗೆ ಸ್ಪಷ್ಟವಾಗಿ ಕಾಣಲು ಸಾಧ್ಯವಿದೆ.

'ಲಾ ಇಲಾಹ ಇಲ್ಲಲ್ಲಾಹ್' (ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರನಾಗಿ ಅನ್ಯರಿಲ್ಲ) ಎಂಬ ಈ ಮೂಲಭೂತ ವಿಶ್ವಾಸವು ಎರಡು ವಿಷಯಗಳನ್ನು ಹೊಂದಿದೆ. ಇದರ ಮೊದಲನೆ ಭಾಗವಾದ 'ಲಾ ಇಲಾಹ' ಅಂದರೆ ಯಾವುದೇ ದೇವರೂ ಇಲ್ಲ ಎಂಬ ಭಾಗವು ಮನುಷ್ಯನು ಆರಾಧಿಸುತ್ತಾ ಬಂದಿರುವ ಸರ್ವ ದೇವ-ದೇವತೆಗಳನ್ನೂ, ವ್ಯಕ್ತಿ-ಶಕ್ತಿಗಳನ್ನೂ ಸಂಪೂರ್ಣವಾಗಿ ತಿರಸ್ಕರಿಸುತ್ತದೆ. ಇದರ ಎರಡನೆಯ ಭಾಗವಾದ 'ಇಲ್ಲಲ್ಲಾಹ್' ಅಂದರೆ ಅಲ್ಲಾಹನ ಹೊರತು ಎಂಬ ಭಾಗವು ಆರಾಧನೆಗೆ ನೈಜ ಹಕ್ಕುದಾರನು ಅಲ್ಲಾಹು ಮಾತ್ರವಾಗಿದ್ದಾನೆ ಎಂಬ ತತ್ವವನ್ನು ಸ್ಥಾಪಿಸುತ್ತದೆ. ಯಾವುದನ್ನು ಆರಾಧಿಸಲಾಗುತ್ತದೋ ಅದನ್ನು ನಾವು ಆರಾಧ್ಯ ಎನ್ನುತ್ತೇವೆ. ಪ್ರಾರ್ಥನೆಯು ಆರಾಧನೆಯ ಅಂತಃಸತ್ವವಾಗಿದೆ. ವಾಸ್ತವವಾಗಿ ಪ್ರಾರ್ಥನೆಯೇ ಆರಾಧನೆಯಾಗಿದೆ. ಪ್ರಾರ್ಥನೆಯ ಅಥವಾ ಆರಾಧನೆಯ ನೈಜ ಹಕ್ಕನ್ನು ಹೊಂದಿರುವ ಯಾರೂ ಇಲ್ಲ, ಯಾವುದೂ ಇಲ್ಲ, ಅಲ್ಲಾಹನ ಹೊರತು. 'ಅಲ್ಲಾಹು' ಎಂಬುದು ಜಗತ್ತಿನ ಸೃಷ್ಟಿಕರ್ತ ಮತ್ತು ಪರಿಪಾಲಕನಾಗಿರುವ ಆರಾಧ್ಯನನ್ನು ಸೂಚಿಸುವ ಅರಬಿ ಪದವಾಗಿದೆ.

'ಅಲ್ಲಾಹು' ಎಂದು ಹೇಳುವಾಗ ಅವನು ಮುಸ್ಲಿಮರೆಂದು ಕರೆಯಲಾಗುವ ಒಂದು ಸಮುದಾಯದ 'ಕುಲದೇವ'ನಾಗಿರುವನು ಎಂದು ಮುಸ್ಲಿಮೇತರರಲ್ಲಿ ಹೆಚ್ಚಿನವರೂ ಭಾವಿಸುತ್ತಾರೆ. ಮುಸ್ಲಿಮೇತರರು ಮಾತ್ರವಲ್ಲ ಮುಸ್ಲಿಮರಲ್ಲಿಯೂ ಬಹುಸಂಖ್ಯಾತರು ಇಂತಹ ಒಂದು ತಪ್ಪು ಕಲ್ಪನೆಯನ್ನಿಟ್ಟುಕೊಂಡಿದ್ದಾರೆ. ಆದರೆ ವಾಸ್ತವವಾಗಿ ಅಲ್ಲಾಹು ಎಂದರೆ ಈ ಗೋಚರ ಪ್ರಪಂಚವನ್ನು ಮತ್ತು ಅದರಾಚೆಗಿರುವ ಸರ್ವವನ್ನೂ ಶೂನ್ಯದಿಂದ

ಸೃಷ್ಟಿಸಿ, ನೆಲೆನಿಲ್ಲಿಸಿ, ಪರಿಪಾಲಿಸಿ, ಕ್ರಮಾನುಕ್ರಮವಾಗಿ ಅಭಿವೃದ್ಧಿಪಡಿಸುತ್ತಿರುವ ಸರ್ವಶಕ್ತನೂ, ಸರ್ವಜ್ಞನೂ, ಸೃಷ್ಟಿಕರ್ತನೂ ಆದ ಪ್ರಪಂಚ ನಿರ್ಮಾತೃನಾಗಿದ್ದಾನೆ. ಅಲ್ಲಾಹು ಎಂದರೆ ಯಾವುದೋ ಒಂದು ಭಾಷೆಯನ್ನು ಮಾತನಾಡುವ ಅಥವಾ ಯಾವುದೋ ಒಂದು ದೇಶದಲ್ಲಿ ವಾಸಿಸುವ ಅಥವಾ ಯಾವುದೋ ಒಂದು ಜನಾಂಗವು ಆರಾಧಿಸುತ್ತಿರುವ ದೇವನಲ್ಲ. ಬದಲಾಗಿ ಸರ್ವ ಮನುಷ್ಯರ ನೈಜ ಆರಾಧ್ಯನು ಅಲ್ಲಾಹು ಮಾತ್ರವಾಗಿದ್ದಾನೆ.

ಮನುಷ್ಯರ ಹೃದಯಗಳಿಂದ ಮತ್ತು ಇತರೆಲ್ಲ ಸೃಷ್ಟಿಗಳಿಂದ ಪ್ರಾಕೃತಿಕವಾಗಿ ಹೊರಹೊಮ್ಮುವ ಪ್ರಾರ್ಥನೆಗಳೆಲ್ಲವೂ ಅವನೆಡೆಗೆ ಏರುತ್ತವೆ. ಓ ದೇವರೇ, ಓ ಗಾಡ್, ಈಶ್ವರಾ ಎಂದು ಮನುಷ್ಯನು ಕರೆಯುವಾಗ, ಆ ವ್ಯಕ್ತಿ ಯಾವುದೇ ಜಾತಿಯಲ್ಲಿ ಸೇರಿದವನಾಗಿದ್ದರೂ, ಯಾವುದೇ ಕುಲದಲ್ಲಿ ಹುಟ್ಟಿದವನಾಗಿದ್ದರೂ ಅವನು ಉದ್ದೇಶಿಸುವುದು ತನ್ನನ್ನು ಸೃಷ್ಟಿಸಿದ ಪ್ರಪಂಚ ನಿರ್ಮಾತೃನಾದ ಅಲ್ಲಾಹನನ್ನಾಗಿದೆ. ಮನುಷ್ಯನಿಂದ ಹೊರಹೊಮ್ಮುವ ಪ್ರಾಕೃತಿಕವಾದ ಪ್ರಾರ್ಥನೆ, ಅದು ಯಾವುದೇ ಹೆಸರಿನಲ್ಲಿ ಕರೆದದ್ದಾಗಿದ್ದರೂ ಅವನ ಸೃಷ್ಟಿಕರ್ತನಿಗಿರುವುದೇ ಆಗಿದೆ. ಇತರ ಮಿಥ್ಯ ದೇವರುಗಳನ್ನು ಜನರು ಸ್ವಯಂ ಕಲ್ಪಿಸಿರುವುದು ಅವರ ಪ್ರಾರ್ಥಿಸಬೇಕೆಂಬ ಅಭಿಲಾಷೆಯನ್ನು ತೃಪ್ತಿಪಡಿಸುವ ಪ್ರಯತ್ನಕ್ಕಾಗಿ ಮಾತ್ರವಾಗಿದೆ. ಅನೈಸರ್ಗಿಕವೂ, ಅವೈಚಾರಿಕವೂ ಆಗಿರುವ ಈ ನಿಲುವನ್ನು ಮನುಷ್ಯನ ನೈಜ ಶತ್ರುವಾಗಿರುವ ಸೈತಾನನು ಸದಾ ಬೆಂಬಲಿಸುತ್ತಾನೆ. ಅಂತಹ ಆರಾಧನೆಗಳು ಮತ್ತು ಪ್ರಾರ್ಥನೆಗಳು ಬಯಕೆಗಳ ಈಡೇರಿಕೆಗೆ ಉತ್ತಮ ವಿಧಾನವಾಗಿದೆ ಎಂಬ ಪ್ರತೀತಿಯನ್ನು ಜನರ ಮನಸ್ಸಿನಲ್ಲಿ ಅಚ್ಚೊತ್ತುವಂತೆ ಮಾಡುವುದಕ್ಕಾಗಿ ಸೈತಾನನು ತನ್ನೆಲ್ಲ ಸಾಮರ್ಥ್ಯವನ್ನೂ ಬಳಸಿ ಶ್ರಮಿಸುತ್ತಿರುತ್ತಾನೆ.

ಅಲ್ಲಾಹನ ಹೊರತು ಅನ್ಯ ಆರಾಧ್ಯನಿಲ್ಲ ಎಂಬ ಇಸ್ಲಾಮಿನ ಪ್ರತಿಜ್ಞೆಯು ನೈಜ ಮನುಷ್ಯ ಪ್ರಕೃತಿಗೆ ಹೊಂದಾಣಿಕೆಯಾಗುವಂತದ್ದಾಗಿದ್ದರೂ ಕೂಡ ಪರಂಪರಾಗತವಾಗಿ ಬಹುದೇವಾರಾಧನೆಯಲ್ಲಿ ಮುಳುಗಿರುವವರಿಗೆ ಅದು ಬಹಳ ಕ್ಲಿಷ್ಟಕರವಾದ ವಿಷಯವಾಗಿ ಕಂಡುಬರುತ್ತದೆ. ಬಹುದೇವಾರಾಧನೆಯನ್ನು ಸಮರ್ಥಿಸಲು ಮತ್ತು ಅದನ್ನು ಸ್ಥಾಪಿಸಲು ತಮ್ಮ ಬುದ್ಧಿಶಕ್ತಿಯನ್ನೂ ವೈಜ್ಞಾನಿಕತೆಯನ್ನೂ ಅವರು ಬಳಸುತ್ತಾರೆ. ಆದರೆ ಜಗತ್ತಿನ ಸೃಷ್ಟಿಕರ್ತನೂ ಸಂರಕ್ಷಕನೂ ಆಗಿರುವವನು ಏಕಮೇವನಾದ ಅಲ್ಲಾಹು ಮಾತ್ರವಾಗಿದ್ದಾನೆ ಎಂಬ ಸತ್ಯವನ್ನು ಗ್ರಹಿಸಲು ಅವರ ಬುದ್ಧಿಶಕ್ತಿ ಮತ್ತು ವೈಜ್ಞಾನಿಕತೆಯು ಅವರೊಂದಿಗೆ ಸಹಕರಿಸುವುದಿಲ್ಲ. ಭೌತಿಕ ವಿಷಯಗಳಲ್ಲಿ ಬಹಳ ಗಹನವಾಗಿ ಆಲೋಚಿಸಿ ವಿವೇಕದೊಂದಿಗೆ ಮುಂದಡಿಯಿಡುವವರು ಸಹ ಆರಾಧನೆಯ ವಿಷಯದಲ್ಲಿ ಅಂಧವಾದ ಅನುಕರಣೆಯನ್ನೂ, ಪರಂಪರಾಗತ ಆಚಾರ ವಿಚಾರಗಳನ್ನು ಅನುಸರಿಸುತ್ತಾರೆ. ಆರಾಧನೆಯ ವಿಷಯದಲ್ಲಿ ಬುದ್ಧಿಶಕ್ತಿ ಮತ್ತು ವಿವೇಕಕ್ಕೆ ಸ್ಥಾನವಿಲ್ಲ ಎಂಬ ನಿಲುವು ಜನರ ಪೈಕಿ ಹೆಚ್ಚಿನವರಿಗೂ ಇದೆ.

# ಆರಾಧನೆಗೆ ನೈಜ ಹಕ್ಕುದಾರನು ಅಲ್ಲಾಹು ಮಾತ್ರವಾಗಿದ್ದಾನೆ

ಪರಮಾಣುವಿನಿಂದ ತೊಡಗಿ ಬೃಹತ್ ಆಕಾಶ ಕಾಯಗಳವರೆಗೆ ಯಾವುದೇ ವಸ್ತು ಕೂಡ ಶೂನ್ಯದಿಂದ ಸ್ವಯಂ ಅಸ್ತಿತ್ವಕ್ಕೆ ಬರುವುದು ಸಾಧ್ಯವಿಲ್ಲ. ಪರಮಾಣುವಿಗಿಂತಲೂ ಚಿಕ್ಕದಾಗಿರುವ ಪ್ರೋಟಾನ್‌ಗಳಾಗಲಿ ಎಲೆಕ್ಟ್ರಾನ್‌ಗಳಾಗಲಿ ಅಥವಾ ಇನ್ನಿತರ ಯಾವುದೇ ಸೂಕ್ಷ್ಮ ಕಣಗಳಾಗಲಿ ಕ್ರಮಾನುಕ್ರಮವಾಗಿ ಉದ್ಭವವಾಗುವಂತದ್ದಲ್ಲ. ಈ ವಾಸ್ತವವನ್ನು ಗ್ರಹಿಸಲು ಮನುಷ್ಯನು ಆಳವಾಗಿ ಚಿಂತಿಸಬೇಕಾದ ಅಗತ್ಯವೇ ಇಲ್ಲ. ಮನುಷ್ಯ ಬುದ್ಧಿಗೆ ಇದನ್ನು ಸುಲಭವಾಗಿ ಮತ್ತು ಸ್ಪಷ್ಟವಾಗಿ ಗ್ರಹಿಸಬಹುದಾಗಿದೆ. ವಿಚಾರವಾದಿಗಳು ಮತ್ತು ಭೌತಿಕವಾದಿಗಳು ಹೇಳುವಂತೆ ಪ್ರಪಂಚವು ಸ್ವಯಂಭೂತವಾಗಿದೆ, ಅದು ಶಾಶ್ವತವಾಗಿ ಅಸ್ತಿತ್ವದಲ್ಲಿರುವಂತದ್ದಾಗಿದೆ ಮತ್ತು ಅದಕ್ಕೆ ಆದಿ ಅಂತ್ಯಗಳೆಂಬುದೇ ಇಲ್ಲ ಎಂಬಂತಹ ವಾದಗಳನ್ನು ಇಂದು ವೈಜ್ಞಾನಿಕ ಜಗತ್ತು ತಿರಸ್ಕರಿಸಿದೆ. ವಿಕಾಸಗೊಳ್ಳುತ್ತಿರುವ ಈ ವಿಶ್ವಕ್ಕೆ ಅದು ವಿಕಾಸಗೊಳ್ಳಲು ಆರಂಭಿಸಿದ ಒಂದು ಹಂತವು ಇರಲೇಬೇಕಾಗಿದೆ. ವಿಶ್ವಕ್ಕೆ ಒಂದು ಆರಂಭವಿತ್ತು ಮತ್ತು ಅದು ಶೂನ್ಯದಿಂದ ಅಸ್ತಿತ್ವಕ್ಕೆ ಬಂದಿರುವುದು ತಟ್ಟನೆ ಒಂದು ಮಹಾ ಆಸ್ಫೋಟದಿಂದಾಗಿದೆಯೆಂದು ಆಧುನಿಕ ವಿಜ್ಞಾನಿಗಳು ಅಭಿಪ್ರಾಯಪಡುತ್ತಾರೆ. ಆದರೆ ಯಾವುದೇ ವಸ್ತುವಿಗೂ ಶೂನ್ಯದಿಂದ ಸ್ವಯಂ ಅಸ್ತಿತ್ವಕ್ಕೆ ಬರುವುದು ಸಾಧ್ಯವಿಲ್ಲ.

ವಿಶ್ವದ ಬಗ್ಗೆ ವಿಜ್ಞಾನಿಗಳ ವೀಕ್ಷಣೆಗಳು ಹೇಗೇ ಇದ್ದರೂ ಕೂಡ ಒಂದು ಚಿಕ್ಕ ಪರಮಾಣುವಿಗೂ ಶೂನ್ಯದಿಂದ ಸ್ವಯಂ ಅಸ್ತಿತ್ವ ಪಡೆಯುವುದಕ್ಕಾಗಲಿ ಸ್ವಯಂಭೂತವಾಗುವುದಕ್ಕಾಗಲಿ ಸಾಧ್ಯವಿಲ್ಲ. ಪರಮಾಣುವಿನ ಒಳ ಘಟಕಗಳು ಮತ್ತು ಅದರ ಆಂತರಿಕ ಚಲನೆಗಳು ಹಾಗೂ ಮತ್ತಿತರ ಸಂಕೀರ್ಣ ಭಾಗಗಳು ಅದರ ಬಗ್ಗೆ ಅಧ್ಯಯನ ಮಾಡುತ್ತಿರುವ ವಿಜ್ಞಾನಿಗಳನ್ನು ಚಕಿತಗೊಳಿಸಿದೆ. ಕೆಲವರು ಅದು ಕೇವಲ ಮಾಯೆ ಎಂದರೆ, ಇನ್ನು ಕೆಲವರು ಅದು ಕೇವಲ ಚಲನೆಯೆನ್ನುತ್ತಾರೆ. ಮತ್ತಿತರರು ಅದು ಮನೋದ್ರವ್ಯ (Mind stuff) ಎನ್ನುತ್ತಾರೆ. ಹೀಗೆ ಅವರು ಅನೇಕ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದಾರೆ.

ಪ್ರಪಂಚದಲ್ಲಿ ಕೇವಲ ಒಂದೇ ಒಂದು ಪರಮಾಣು ಮಾತ್ರ ಇರುವುದಾದರೂ ಕೂಡ ಅದಕ್ಕೆ ಅಸ್ತಿತ್ವವನ್ನು ನೀಡಿ ಅದನ್ನು ನೆಲೆನಿಲ್ಲಿಸುವ ಓರ್ವ ಸೃಷ್ಟಿಕರ್ತನಿಲ್ಲದೆ ಅದು ಅಸ್ತಿತ್ವಕ್ಕೆ ಬರಲು ಸಾಧ್ಯವಿಲ್ಲ. ಪರಮಾಣುವಿನ ಮಧ್ಯಭಾಗದಲ್ಲಿ ಚಲಿಸುತ್ತಿರುವ ಪ್ರೋಟಾನ್ ಮತ್ತು ಅದರ ಸುತ್ತಲೂ ಸುತ್ತುತ್ತಿರುವ ಎಲೆಕ್ಟ್ರಾನ್‌ಗಳೆಲ್ಲವೂ ಚಲಿಸುತ್ತಿರುವುದು ಆ ಸೃಷ್ಟಿಕರ್ತನ ಆಜ್ಞೆಗೆ ವಿಧೇಯವಾಗಿಯೇ ಆಗಿದೆ. 'ಕುನ್' (ಉಂಟಾಗು) ಎಂಬ ಆ ಆಜ್ಞೆಯೇ ಪರಮಾಣುವಿನಿಂದ ತೊಡಗಿ ಬೃಹತ್ ಆಕಾಶ ಕಾಯಗಳವರೆಗಿರುವ ಸರ್ವ ವಸ್ತುಗಳ ಅಸ್ತಿತ್ವದ ಹಿಂದಿರುವ ರಹಸ್ಯ! ಪರಮಾಣುವಿನಲ್ಲಿರುವ ಪ್ರೋಟಾನ್ ಮತ್ತು ಎಲೆಕ್ಟ್ರಾನ್‌ಗಳ ಸಂಖ್ಯಾ ವ್ಯತ್ಯಾಸಕ್ಕೆ ಅನುಗುಣವಾಗಿ ವಿವಿಧ ಪದಾರ್ಥಗಳಿಗೆ ವಿವಿಧ ಗುಣಗಳನ್ನು ನೀಡುವವನೂ, ಅವುಗಳನ್ನು ಅವುಗಳ ಪಥಗಳಲ್ಲಿ ಚಲಿಸುವಂತೆ

ಮಾಡುವವನೂ ಸೃಷ್ಟಿಕರ್ತನೇ ಆಗಿದ್ದಾನೆ. ಸರ್ವ ವಸ್ತುಗಳಿಗೂ ಸೃಷ್ಟಿಯನ್ನು ನೀಡಿ ಅವುಗಳನ್ನು ಅವುಗಳ ಪಥಗಳಲ್ಲಿ ಚಲಿಸುವಂತೆ ಮಾಡುತ್ತಿರುವ ಸೃಷ್ಟಿಕರ್ತನಾದ ಅಲ್ಲಾಹನ ಆಜ್ಞೆಯ ಪ್ರಕಾರವೇ ಈ ಪ್ರಪಂಚ ಮತ್ತು ಅದರಲ್ಲಿರುವ ಸರ್ವ ಚರಾಚರಗಳು ಅಸ್ತಿತ್ವಕ್ಕೆ ಬಂದಿವೆ.

﴿إِنَّمَآ أَمۡرُهُۥٓ إِذَآ أَرَادَ شَيۡـًٔا أَن يَقُولَ لَهُۥ كُن فَيَكُونُ ٨٢﴾

**“ಯಾವುದೇ ವಸ್ತು ಉಂಟಾಗಬೇಕೆಂದು ಅವನು (ಅಲ್ಲಾಹು) ಇಚ್ಛಿಸಿದರೆ ಅವನ ಆಜ್ಞೆಯು ಅವನು ಅದರೊಂದಿಗೆ ಕೇವಲ ‘ಕುನ್’ (ಉಂಟಾಗು) ಎಂದು ಹೇಳುವುದು ಮಾತ್ರವಾಗಿರುತ್ತದೆ. ತಕ್ಷಣ ಅದು ಉಂಟಾಗುತ್ತದೆ.”** [ಕುರ್‌ಆನ್ 36/82]

ಆದರಣೀಯ ಕುರ್‌ಆನ್ ಸೃಷ್ಟಿಕರ್ತನನ್ನು ಪರಿಚಯಿಸಿ ಕೊಡುವುದು ಈ ರೀತಿಯಾಗಿದೆ. ಅವನು ಉಂಟಾಗಬೇಕೆಂದು ಇಚ್ಛಿಸುವ ವಸ್ತು ಶೂನ್ಯದಿಂದ ಉದ್ಭವವಾಗುತ್ತದೆ. ಅವನ ಸತ್ವ (essence) ಮತ್ತು ಗುಣವಿಶೇಷಣಗಳು (attributes) ಹೋಲಿಕೆಯಿಲ್ಲದ್ದಾಗಿವೆ. ಅವನಂತೆ ಯಾವುದೂ ಇಲ್ಲ. ಅವನಿಚ್ಛಿಸುವುದನ್ನು ಶೂನ್ಯದಿಂದ ಕೇವಲ ಆಜ್ಞೆಯೊಂದಿಗೆ ಉದ್ಭವಗೊಳಿಸುವಂತಹ ಅಪಾರವಾದ ಮತ್ತು ಹೋಲಿಕೆರಹಿತವಾದ ಸಾಮರ್ಥ್ಯಕ್ಕೆ ಅನುಯೋಜ್ಯವಾಗಿರುವ ಅವನ ಸತ್ವವನ್ನು ಭಾವನೆಯಲ್ಲಿ ಮೂಡಿಸಲು ಸಾಧ್ಯವಿಲ್ಲ. ಆದರೆ ಅವನ ದೃಷ್ಟಾಂತಗಳಿಂದ ಇದನ್ನು ಗ್ರಹಿಸಬಹುದಾಗಿದೆ. ಅವನ ಸತ್ವದ ಬಗ್ಗೆ ಚಿಂತಿಸಿ ಅವನಿಗೊಂದು ಮೂರ್ತ ರೂಪವನ್ನು ನೀಡುವುದು ಅಸಾಧ್ಯ. ಅದು ಕೇವಲ ವಿಭ್ರಾಂತಿಯತ್ತ ಮಾತ್ರವೇ ತಲುಪಿಸಬಹುದು. ನಾವು ಕಾಣುತ್ತಿರುವ ಬಾನಲೋಕ, ನಕ್ಷತ್ರಗಳು, ಸೂರ್ಯ, ಚಂದ್ರ, ಭೂಮಿ ಹಾಗೂ ಇತರ ಜೀವರಾಶಿಗಳೆಲ್ಲವೂ ಅವನ ದೃಷ್ಟಾಂತಗಳಾಗಿವೆ ಮತ್ತು ಅವನ ಸೃಷ್ಟಿಗಳಾಗಿವೆ.

﴿وَكَأَيِّن مِّنۡ ءَايَةٖ فِي ٱلسَّمَٰوَٰتِ وَٱلۡأَرۡضِ يَمُرُّونَ عَلَيۡهَا وَهُمۡ عَنۡهَا مُعۡرِضُونَ ١٠٥﴾

**“ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವ ಎಷ್ಟೊಂದು ದೃಷ್ಟಾಂತಗಳ ಮೂಲಕ ಅವರು ಹಾದುಹೋಗುತ್ತಿದ್ದಾರೆ. ಆದರೂ ಅವರು ಅವುಗಳ ಬಗ್ಗೆ ವಿಮುಖರಾಗಿದ್ದಾರೆ.”** [ಕುರ್‌ಆನ್ 12/105]

ಭೂಮಿಯನ್ನು ಮನುಷ್ಯರಿಗೆ ಮತ್ತು ಇತರ ಜೀವರಾಶಿಗಳಿಗೆ ಬದುಕಲು ಯೋಗ್ಯವಾದ ರೀತಿಯಲ್ಲಿ ಸಜ್ಜೀಕರಿಸಿದ್ದು ಅಂಧವಾದ, ಬುದ್ಧಿಯಿಲ್ಲದ ಪ್ರಕೃತಿಯಲ್ಲ. ಆಕಾಶದಲ್ಲಿರುವ ಕೋಟ್ಯಂತರ ಕಾಯಗಳಲ್ಲಿ ಯಾವುದರಲ್ಲಿಯೂ ಇಲ್ಲದ ವಾಯುಮಂಡಲ, ಜಲ, ಆಹಾರ ಪದಾರ್ಥಗಳು ಮತ್ತಿತರ ಸೌಲಭ್ಯಗಳನ್ನು ಭೂಮಿಯಲ್ಲಿ ಅತ್ಯಂತ ಕರಾರುವಾಕ್ಕಾಗಿ ಮತ್ತು ವ್ಯವಸ್ಥಿತವಾಗಿ ಉಂಟುಮಾಡಿರುವುದು ಸರ್ವಜ್ಞನೂ, ಸರ್ವಶಕ್ತನೂ, ಪರಮ ದಯಾಮಯನೂ ಆದ ಅಲ್ಲಾಹನಾಗಿದ್ದಾನೆ. ಬುದ್ಧಿ ಮತ್ತು ವಿವೇಕವನ್ನು ನೀಡಲಾಗಿರುವ ಮನುಷ್ಯರಿಗಾಗಿ ಅವನು ಈ ಅನುಗ್ರಹಗಳನ್ನು ದಯಪಾಲಿಸಿರುವುದು ಅವರು ಅವನ ದೃಷ್ಟಾಂತಗಳ ಮೂಲಕ ಅವನನ್ನು ಅರಿತುಕೊಂಡು ಅವನಿಗೆ ಕೃತಜ್ಞತೆ ಸಲ್ಲಿಸಿ ಅವನನ್ನು ಮಾತ್ರ ಆರಾಧಿಸುವ ಸಲುವಾಗಿದೆ.

ಅಲ್ಲಾಹನ ಅನುಗ್ರಹಗಳಿಗಾಗಿ ಅವನಿಗೆ ಕೃತಜ್ಞತೆ ಸಲ್ಲಿಸುತ್ತಾ, ಅವನಿಂದ ಹೆಚ್ಚಿನ ಅನುಗ್ರಹಗಳನ್ನು ನಿರೀಕ್ಷಿಸುತ್ತಾ, ಅವನೊಂದಿಗೆ ಕೆಡುಕುಗಳಿಂದ ರಕ್ಷಣೆಯನ್ನು ಬೇಡುತ್ತಾ, ಅವನೊಂದಿಗೆ ಮಾತ್ರ ಪ್ರಾರ್ಥಿಸುತ್ತಾ, ಅವನನ್ನು ಮಾತ್ರ ಆರಾಧಿಸುತ್ತಾ ಬದುಕಬೇಕಾದ ಮನುಷ್ಯನು ತನ್ನ ಪ್ರಾರ್ಥನೆಗಳನ್ನು ಮತ್ತು ಆರಾಧನೆಗಳನ್ನು ಸಲ್ಲಿಸಲು ಹಲವಾರು ಆರಾಧ್ಯರನ್ನು ಸ್ವಯಂ ಕಲ್ಪಿಸಿ ತಮ್ಮಿಷ್ಟದಂತೆ ನಿಶ್ಚಯಿಸಿಕೊಳ್ಳುವುದು ಮಹಾ ಅಪರಾಧವಾಗಿದೆ. ತನ್ನ ಸ್ವಂತ ಅಸ್ತಿತ್ವಕ್ಕಾಗಿ ಅಲ್ಲಾಹು ನೀಡಿದ ಅನುಗ್ರಹಗಳಿಗೆ ಕೃತಜ್ಞತೆ ಸಲ್ಲಿಸಿ ಅವನಿಗೆ ಋಣಿಯಾಗಿ ಬದುಕಲು ಮನುಷ್ಯನಿಗೆ ಸಾಧ್ಯವಾಗುವುದಿಲ್ಲವೆಂದಾದರೆ ಅಲ್ಲಾಹನ ಇತರ ಅಸಂಖ್ಯ ಅನುಗ್ರಹಗಳಿಗಾಗಿ ಕೃತಜ್ಞತೆ ಸಲ್ಲಿಸುತ್ತಾ ಬದುಕಲು ಮನುಷ್ಯನಿಗೆ ಹೇಗೆ ತಾನೇ ಸಾಧ್ಯ?

﴿ أَفَمَن يَخۡلُقُ كَمَن لَّا يَخۡلُقُۚ أَفَلَا تَذَكَّرُونَ ﴿١٧﴾ وَإِن تَعُدُّواْ نِعۡمَةَ ٱللَّهِ لَا تُحۡصُوهَآۗ إِنَّ ٱللَّهَ لَغَفُورٞ رَّحِيمٞ ﴿١٨﴾ ﴾

**“ಹಾಗಾದರೆ ಸೃಷ್ಟಿಸುವವನು ಸೃಷ್ಟಿಸದವನಂತೆ ಆಗಿರುವನೇ? ನೀವು ಆಲೋಚಿಸುವುದಿಲ್ಲವೇ? ನೀವು ಅಲ್ಲಾಹನ ಅನುಗ್ರಹಗಳನ್ನು ಎಣಿಸುವುದಾದರೆ ಅವುಗಳನ್ನು ಎಣಿಕೆ ಮಾಡಲು ನಿಮ್ಮಿಂದ ಸಾಧ್ಯವಾಗದು. ಖಂಡಿತವಾಗಿಯೂ ಅಲ್ಲಾಹು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿದ್ದಾನೆ.”**
[ಕುರ್‌ಆನ್ 16/17–18]

ಆರಾಧನೆಗೆ ನೈಜ ಹಕ್ಕುದಾರನು ಅಲ್ಲಾಹು ಮಾತ್ರವಾಗಿದ್ದಾನೆ. ಆರಾಧನೆಗೆ ಮತ್ತು ಪ್ರಾರ್ಥನೆಗೆ ಉತ್ತರವನ್ನು ನೀಡಲು ಅವನಿಂದ ಮಾತ್ರ ಸಾಧ್ಯ! ಪ್ರಾರ್ಥನೆ ಮತ್ತು ಆರಾಧನೆಗಳು ಕೇವಲ ಮಾನಸಿಕ ವ್ಯಾಯಾಮಗಳಲ್ಲ. ಅವು ಉತ್ತರ

ಸಿಗಬೇಕಾದ ವಿಷಯಗಳಾಗಿವೆ. ಪ್ರಾರ್ಥನೆಗೆ ಉತ್ತರ ಸಿಗಬೇಕು ಎಂಬುದು ಸೃಷ್ಟಿಗಳ ಅಭಿಲಾಷೆಯಾಗಿದೆ. ಅದನ್ನು ಪೂರ್ತೀಕರಿಸಲು ಸೃಷ್ಟಿಕರ್ತನಿಂದ ಮಾತ್ರ ಸಾಧ್ಯ.

ಸೃಷ್ಟಿಕರ್ತನ ಹೊರತಾಗಿ ಉಪಕಾರವಾಗಲಿ ಹಾನಿಯಾಗಲಿ ಮಾಡಲು ಸಾಧ್ಯವಾಗದಂತಹ ವಸ್ತುಗಳನ್ನು ಮತ್ತು ವ್ಯಕ್ತಿಗಳನ್ನು ಕರೆದು ಪ್ರಾರ್ಥಿಸುವುದು ಮತ್ತು ಅವರಿಗೆ ಆರಾಧನೆಗಳನ್ನು ಸಲ್ಲಿಸುವುದು ಮಹಾ ಅನ್ಯಾಯವೂ ಪರಮ ಮೂರ್ಖತನವೂ ಆಗಿದೆ. ಬುದ್ಧಿ ಮತ್ತು ವಿವೇಕವಿರುವ ಮನುಷ್ಯನ ಕರ್ತವ್ಯವು ಅಲ್ಲಾಹನ ಅನುಗ್ರಹಗಳಿಗೆ ಕೃತಜ್ಞರಾಗಿರುತ್ತಾ ಆತ್ಯಂತಿಕವಾದ ಪ್ರೀತಿ ಮತ್ತು ವಿನಮ್ರತೆಯೊಂದಿಗೆ ಅವನನ್ನು ಮಾತ್ರ ಆರಾಧಿಸುವುದಾಗಿದೆ. ವಾಸ್ತವವಾಗಿ ಅಲ್ಲಾಹನಿಗೆ ನಮ್ಮ ಕೃತಜ್ಞತೆ ಅಥವಾ ಆರಾಧನೆಯ ಅಗತ್ಯವಿಲ್ಲ. ಅವನು ನಿರಪೇಕ್ಷನಾಗಿದ್ದಾನೆ. ಅವನು ನೀಡಿದ ಅನುಗ್ರಹಗಳಿಗೆ ಕೃತಜ್ಞರಾಗಿರುತ್ತಾ, ಅವನಿಂದ ಹೆಚ್ಚಿನ ಅನುಗ್ರಹಗಳನ್ನು ನಿರೀಕ್ಷಿಸುತ್ತಾ, ಅವನೊಂದಿಗೆ ಕೆಡುಕುಗಳಿಂದ ರಕ್ಷಣೆಯನ್ನು ಬೇಡುತ್ತಾ, ನಾವು ಮಾಡುತ್ತಿರುವ ಆರಾಧನೆಗಳು ಮತ್ತು ಪ್ರಾರ್ಥನೆಗಳು ಹಾಗೂ ನಾವು ಸಲ್ಲಿಸುತ್ತಿರುವ ಕೃತಜ್ಞತೆಗಳು ನಮ್ಮ ಹಿತಕ್ಕೇ ಆಗಿವೆ.

﴿ ۞ يَـٰٓأَيُّهَا ٱلنَّاسُ أَنتُمُ ٱلْفُقَرَآءُ إِلَى ٱللَّهِ ۖ وَٱللَّهُ هُوَ ٱلْغَنِىُّ ٱلْحَمِيدُ ﴿١٥﴾ ﴾

**“ಓ ಮನುಷ್ಯರೇ! ಅಲ್ಲಾಹನನ್ನು ಅವಲಂಬಿಸಿರುವವರು ನೀವಾಗಿರುವಿರಿ! ಅಲ್ಲಾಹನಾದರೋ ಸಂಪನ್ನನೂ (ನಿರಪೇಕ್ಷನೂ) ಸ್ತುತ್ಯರ್ಹನೂ ಆಗಿದ್ದಾನೆ.”**
[ಕುರ್‌ಆನ್ 35/15]

## ವೈಚಾರಿಕತೆಗೆ ವಿರುದ್ಧವಾಗಿರುವ ನಾಸ್ತಿಕರ ವಾದ

ಸೃಷ್ಟಿಕರ್ತನೂ, ಪರಿಪಾಲಕನೂ ಆದ ಅಲ್ಲಾಹನ ದೃಷ್ಟಾಂತಗಳು ಜಗತ್ತಿನಾದ್ಯಂತ ಹಬ್ಬಿಕೊಂಡಿವೆ. ದೇವಾಸ್ತಿತ್ವವನ್ನು ದೃಢೀಕರಿಸುವ ಅಸಂಖ್ಯ ದೃಷ್ಟಾಂತಗಳು ಲೋಕದಾದ್ಯಂತ ಹಬ್ಬಿಕೊಂಡಿದ್ದರೂ, ಕಣ್ಣಿಗೆ ರಾಚುತ್ತಿದ್ದರೂ, ದೇವಾಸ್ತಿತ್ವವನ್ನು ವಿರೋಧಿಸುವವರು ದೇವನೆಂಬುದು ಮನುಷ್ಯ ಸೃಷ್ಟಿಯೆಂದು ವಾದಿಸುತ್ತಿದ್ದಾರೆ! ಅವರ ವಾದವು ಹೀಗಿದೆ:

**“ಪ್ರಾಚೀನ ಜನರು ಪ್ರಾಕೃತಿಕ ವಿದ್ಯಮಾನಗಳನ್ನು ಕಂಡು ಭಯಭೀತರಾಗಿ ಅನೇಕ ದೇವರುಗಳನ್ನು ಆರಾಧಿಸತೊಡಗಿದರು. ಅಗ್ನಿ, ಸೂರ್ಯ, ಚಂದ್ರ, ಗಾಳಿ, ಬೆಳಕು ಇತ್ಯಾದಿಗಳೆಲ್ಲವೂ ಅವರಿಗೆ ದೇವರುಗಳಾಗಿದ್ದವು. ಆದರೆ ಮನುಷ್ಯನು ನಾಗರಿಕತೆಯೊಂದಿಗೆ ಅಭಿವೃದ್ಧಿ ಹೊಂದಿದಾಗ ಅವನ ದೇವರುಗಳ ಸಂಖ್ಯೆಯು ಕ್ಷೀಣಿಸತೊಡಗಿತು. ತರುವಾಯ ಹಲವು ಕೋಟಿ ದೇವರುಗಳು ಮೂರಕ್ಕೆ ಇಳಿದವು. ಕೊನೆಗೆ ಮೂರು ಒಂದಕ್ಕಿಳಿಯಿತು.**

**ದೇವನು ಒಬ್ಬನು ಎಂದು ಮುಹಮ್ಮದ್ ವಾದಿಸಿದರು. ಆದರೆ ಈಗ ಕಾಲವು ಬಹಳ ಮುಂದುವರಿದಿದೆ. ವಿಜ್ಞಾನವು ಉತ್ತುಂಗತೆಯಲ್ಲಿದೆ. ಆದ್ದರಿಂದ ಇನ್ನು ನಮಗೆ ಒಬ್ಬನೇ ಒಬ್ಬ ದೇವನ ಅಗತ್ಯವೂ ಇಲ್ಲ!"**

ನಾಸ್ತಿಕರು ವಾದಿಸುವಂತೆ ಸಿಡಿಲು, ಮಿಂಚು, ಗಾಳಿ, ಮಳೆ ಇತ್ಯಾದಿ ಪ್ರಾಕೃತಿಕ ವಿದ್ಯಮಾನಗಳು ಪ್ರಾಚೀನಕಾಲದ ಜನರಿಗೆ ಅನೇಕ ದೇವರುಗಳನ್ನು ಸ್ವಯಂ ಕಲ್ಪಿಸಲು ಹೇತುವಾಯಿತು ಎಂದಿಟ್ಟುಕೊಳ್ಳೋಣ! ಆದರೆ ಆ ಪ್ರಾಚೀನಕಾಲಕ್ಕಿಂತಲೂ ಮುಂಚಿನ ಕಾಲದ ಬಗ್ಗೆಯೂ ನಾವು ಯೋಚಿಸಬೇಡವೇ? ಅದಕ್ಕಿಂತಲೂ ಮುಂಚೆ ಜನರು ಅಸ್ತಿತ್ವದಲ್ಲಿದ್ದರಲ್ಲವೇ? ಹಾಗಾದರೆ ಅವರಲ್ಲಿ ಈ ಪ್ರಪಂಚ ಮತ್ತು ಅದರಲ್ಲಿದ್ದ ಸೃಷ್ಟಿಗಳು ಯಾವ ರೀತಿಯ ಪ್ರತಿಕ್ರಿಯೆಯನ್ನು ಉಂಟುಮಾಡಿತು? ಈ ಜಗತ್ತು ಸ್ವಯಂಭೂತವಾದುದಾಗಿದೆ ಮತ್ತು ಪದಾರ್ಥಗಳು ಕಾಲಾಂತರದಲ್ಲಿ ವಿಕಾಸಗೊಂಡ ಕಾರಣ ನಾವೆಲ್ಲರೂ ಉಂಟಾದೆವು ಎಂದು ಇಂದಿನ ನಾಸ್ತಿಕರು ಮತ್ತು ಭೌತಿಕವಾದಿಗಳು ವಾದಿಸುವಂತೆ ಆ ಪ್ರಾಚೀನಕಾಲದ ಮುಂಚೆ ಬದುಕಿದ್ದ ಜನರೂ ಭಾವಿಸಿದ್ದರೇ? ಇದ್ದರೆ ಅದಕ್ಕಿರುವ ಆಧಾರವೇನು? ಇದು ಯಾವುದೇ ಭೌತಿಕವಾದಿಯೂ ಚಿಂತಿಸಲೇ ಬೇಕಾದ ವಿಚಾರವಾಗಿದೆ.

ಈ ಪ್ರಪಂಚ ಮತ್ತು ಅದರಲ್ಲಿರುವ ಪ್ರಾಕೃತಿಕ ವಿದ್ಯಮಾನಗಳು ಪ್ರಾಚೀನ ಜನರಲ್ಲಿ ಉಂಟು ಮಾಡಿದ ಪ್ರತಿಕ್ರಿಯೆಯು ಈ ಜಗತ್ತಿಗೊಬ್ಬ ಸೃಷ್ಟಿಕರ್ತನಾದ ದೇವನಿದ್ದಾನೆ ಎಂಬ ವಿಶ್ವಾಸವನ್ನಾಗಿತ್ತು. ಅವರ ಮೂಲ ವಿಶ್ವಾಸವು ಅದೇ ಆಗಿತ್ತು. ಸೃಷ್ಟಿಕರ್ತನಾದ ಏಕೈಕ ದೇವನಲ್ಲಿರುವ ವಿಶ್ವಾಸವು ಅವರಲ್ಲಿ ಅಸ್ತಿತ್ವದಲ್ಲಿರುವಾಗಲೇ ಅವರು ಪ್ರಾಕೃತಿಕ ವಿದ್ಯಮಾನಗಳನ್ನು ವಿವಿಧ ದೇವದೇವತೆಗಳೊಂದಿಗೆ ಥಳಕು ಹಾಕಿ ತಮ್ಮದೇ ವತಿಯ ಪರಿಕಲ್ಪನೆಗಳನ್ನು ನಿರ್ಮಿಸಿಕೊಂಡರು. ಈ ದೇವದೇವತೆಗಳು ಪ್ರಪಂಚ ಸೃಷ್ಟಿಕರ್ತನಾದ ಏಕೈಕ ದೇವನ ಬಳಿ ತಮಗಾಗಿ ಶಿಫಾರಸು ಮಾಡುವ ಮಧ್ಯವರ್ತಿಗಳಾಗಿದ್ದಾರೆಂದು ಅವರು ಭಾವಿಸಿದರು.

ಆದಿಮಾನವನ ಮೂಲವಿಶ್ವಾಸವು ಸೃಷ್ಟಿಕರ್ತನೂ ಪರಿಪಾಲಕನೂ ಆದ ಏಕೈಕ ದೇವನಲ್ಲಿರುವ ವಿಶ್ವಾಸವಾಗಿತ್ತು. ಬಹುದೇವ ವಿಶ್ವಾಸವು ಉದ್ಭವವಾದದ್ದು ಅವರ ಬಳಿಕವಾಗಿತ್ತು. ಆಫ್ರಿಕಾದ ದಟ್ಟಡವಿಗಳಲ್ಲಿ ವಾಸಿಸುವ ಸಹಸ್ರ ಸಂಖ್ಯೆಯ ಜನಾಂಗಗಳು ಅಸಂಖ್ಯ ದೇವದೇವತೆಗಳನ್ನೂ ಮೂರ್ತಿ ವಿಗ್ರಹಗಳನ್ನೂ ಆರಾಧಿಸುತ್ತಾರಾದರೂ ಅವೆಲ್ಲಕ್ಕಿಂತಲೂ ಮೇಲಿನ ಸ್ಥಾನದಲ್ಲಿರುವವನಾಗಿ ಅವರು ಪ್ರಪಂಚಕರ್ತನಾದ ಏಕೈಕ ದೇವನಲ್ಲಿ ವಿಶ್ವಾಸವಿಡುತ್ತಾರೆ.

ಪ್ರಾಚೀನ ಮನುಷ್ಯರು ಆರಂಭದಲ್ಲಿ ಬಹುದೇವ ವಿಶ್ವಾಸಿಗಳಾಗಿದ್ದರು, ವಿಜ್ಞಾನವು ಅಭಿವೃದ್ಧಿ ಹೊಂದಿದಂತೆ ಅವರ ದೇವರ ಸಂಖ್ಯೆಯು ಇಳಿಮುಖವಾಗಿ ಒಂದಕ್ಕೆ ತಲುಪಿತು, ವಿಜ್ಞಾನವು ಇನ್ನೂ ಅಭಿವೃದ್ಧಿ ಹೊಂದಿದರೆ ಆ ಏಕದೇವನು ಕೂಡ ಇಲ್ಲದಾಗುವನು ಎಂಬ ನಾಸ್ತಿಕರ ಮಾತುಗಳು ಸತ್ಯಕ್ಕೆ ಮಾತ್ರವಲ್ಲ ವೈಚಾರಿಕತೆಗೂ ನಿಲುಕದ್ದಾಗಿದೆ.

ವಿಜ್ಞಾನದ ತುತ್ತತುದಿಯಲ್ಲಿರುವ ಎಷ್ಟೋ ಬಹುದೇವ ವಿಶ್ವಾಸಿಗಳಿಲ್ಲವೇ? ವಿಜ್ಞಾನದ ಬಗ್ಗೆ ಸ್ವಲ್ಪವೂ ಅರಿವಿಲ್ಲದ ಎಷ್ಟೋ ಏಕದೇವ ವಿಶ್ವಾಸಿಗಳು ಮತ್ತು ನಾಸ್ತಿಕರಿಲ್ಲವೇ? ವಿಜ್ಞಾನವು ಅಭಿವೃದ್ಧಿ ಹೊಂದಿದಂತೆ ದೇವವಿಶ್ವಾಸವು ಕ್ಷೀಣಿಸುತ್ತದೆಂದು ಹೇಳುವುದು ಕೇವಲ ಒಂದು ಭ್ರಮೆ ಮಾತ್ರವಾಗಿದೆ.

ಏನೇ ಆದರೂ ಒಂದು ವಿಷಯವಂತೂ ಸ್ಪಷ್ಟ. ಮನುಷ್ಯರು ಎಲ್ಲೆಲ್ಲ ಅಸ್ತಿತ್ವದಲ್ಲಿದ್ದಾರೋ ಅಲ್ಲೆಲ್ಲ ದೇವವಿಶ್ವಾಸವಿದೆ. ದೇವವಿಶ್ವಾಸವೆಂಬುದು ಮನುಷ್ಯ ಪ್ರಕೃತಿಯಲ್ಲಿ ಅಂತರ್ಗತವಾಗಿರುವ ಜನ್ಮತಃ ಉಂಟಾಗುವ ಒಂದು ವಿಶ್ವಾಸವಾಗಿದೆ. ಧ್ರುವ ಪ್ರದೇಶಗಳಲ್ಲಿ, ಮರುಭೂಮಿಗಳಲ್ಲಿ, ಪರ್ವತಶಿಖರಗಳಲ್ಲಿ, ಅರಣ್ಯಗಳಲ್ಲಿ, ದ್ವೀಪಗಳಲ್ಲಿ, ದಟ್ಟಡವಿಗಳಲ್ಲಿ ಹೀಗೆ ಮನುಷ್ಯರು ಬದುಕುತ್ತಿರುವ ಎಲ್ಲ ಪ್ರದೇಶಗಳಲ್ಲೂ ದೇವವಿಶ್ವಾಸವಿದೆ. ಇವರು ಯಾವುದಾದರೂ ಒಂದು ವಿಧದಲ್ಲಿ –ಅದು ಏಕದೇವ ವಿಶ್ವಾಸದ ಮೂಲಕವಾಗಲಿ, ಅಥವಾ ಬಹುದೇವವಿಶ್ವಾಸದ ಮೂಲಕವಾಗಲಿ– ದೇವರ ಅಸ್ತಿತ್ವವನ್ನು ಅಂಗೀಕರಿಸುವವರಾಗಿದ್ದಾರೆ. ಸೃಷ್ಟಿಕರ್ತನಾದ ದೇವನ ಬಗ್ಗೆ ಪ್ರಜ್ಞೆಯಿಲ್ಲದ ಒಂದೇ ಒಂದು ಜನತೆಯೂ ಇರಲಿಲ್ಲ.

﴿ وَمَا كَانَ ٱلنَّاسُ إِلَّآ أُمَّةً وَٰحِدَةً فَٱخْتَلَفُوا۟ ﴾

**“ಮನುಷ್ಯರು ಏಕೈಕ ಸಮುದಾಯದ ಹೊರತು ಇನ್ನೇನೂ ಆಗಿರಲಿಲ್ಲ. ತರುವಾಯ ಅವರು ಭಿನ್ನರಾದರು”.** [ಕುರ್‌ಆನ್ 10/19]

ಏಕದೇವನಲ್ಲಿ ವಿಶ್ವಾಸವಿಟ್ಟು ಅವನನ್ನು ಮಾತ್ರ ಆರಾಧಿಸುತ್ತಿದ್ದ ಆದಿ ಮನುಷ್ಯ ಸಮುದಾಯವು ಕಾಲಾಂತರದಲ್ಲಿ ಭಿನ್ನರಾದರು. ಪೈಶಾಚಿಕವಾದ ಪ್ರೇರಣೆಗಳು, ಊಹೆಗಳು ಮತ್ತು ದೇಹೇಚ್ಛೆಗಳು ಅವರಲ್ಲಿ ಅನೇಕ ದೇವರುಗಳ ಕಲ್ಪನೆಗೆ ಪ್ರೋತ್ಸಾಹ ನೀಡಿದವು. ಏಕದೇವ ವಿಶ್ವಾಸವೆಂಬುದು ಬಹುದೇವವಿಶ್ವಾಸದಿಂದ ಕ್ರಮೇಣ ಕ್ಷೀಣಿಸುತ್ತಾ ಬಂದ ವಿಶ್ವಾಸವಾಗಿದೆ ಎಂಬ ವಾದ ಸರಿಯಲ್ಲ. ಅದಕ್ಕೆ ಯಾವುದೇ ಆಧಾರವೂ ಇಲ್ಲ. ವೈಚಾರಿಕತೆಯು ಕೂಡ ಅದನ್ನು ಅಂಗೀಕರಿಸುವುದಿಲ್ಲ. ಮಾತ್ರವಲ್ಲ, ವಾಸ್ತವವು ಕೂಡ ಅದಕ್ಕೆ ತದ್ವಿರುದ್ಧವಾಗಿದೆ. ವಾಸ್ತವ ಸಂಗತಿಯೇನೆಂದರೆ ಮೊಟ್ಟಮೊದಲು ಅಸ್ತಿತ್ವದಲ್ಲಿದ್ದುದು ಏಕದೇವವಿಶ್ವಾಸವಾಗಿತ್ತು. ತರುವಾಯ ಜನರು ದಾರಿತಪ್ಪಿ ಬಹುದೇವವಿಶ್ವಾಸದೆಡೆಗೆ ಚಲಿಸಿದರು. ಪ್ರವಾದಿಗಳು ಮತ್ತು ಗ್ರಂಥಗಳು ಬಹುದೇವವಿಶ್ವಾಸದೆಡೆಗೆ ಚಲಿಸಿದ ಜನರನ್ನು ಏಕದೇವವಿಶ್ವಾಸದೆಡೆಗೆ ಮರಳಿ ಆಹ್ವಾನಿಸುವ ಕರ್ತವ್ಯವನ್ನು ನಿರ್ವಹಿಸಿದ್ದರು.

# ಪ್ರವಾದಿಗಳು ದೇವಾವತಾರಗಳಲ್ಲ

ಮರಣಾನಂತರ ಬದುಕು ಅಥವಾ ಪರಲೋಕ ಜೀವನದ ಬಗ್ಗೆ ಮುನ್ನೆಚ್ಚರಿಕೆ ಹಾಗೂ ಶುಭವಾರ್ತೆಯನ್ನು ನೀಡಲು, ಅಲ್ಲಾಹನ ಅನುಗ್ರಹವನ್ನು ಜನರು ಸ್ಮರಿಸುವಂತೆ ಮಾಡಲು ಮತ್ತು ಅವನನ್ನು ಮಾತ್ರ ಆರಾಧಿಸಬೇಕೆಂದು ಜನರಿಗೆ ಬೋಧಿಸಲು ಅಲ್ಲಾಹು ಮನುಷ್ಯರಿಂದಲೇ ಪ್ರವಾದಿಗಳನ್ನು ಕಳುಹಿಸಿದನು. ಅವರೊಂದಿಗೆ ಗ್ರಂಥಗಳನ್ನೂ ಅವತೀರ್ಣಗೊಳಿಸಿದನು. ಹೀಗೆ ಎಲ್ಲ ಜನಸಮೂಹಗಳಲ್ಲೂ ಸಂದೇಶವಾಹಕರನ್ನು ಅಥವಾ ಪ್ರವಾದಿಗಳನ್ನು ಕಳುಹಿಸಲಾಗಿದೆ. ಮನುಷ್ಯರಿಗೆ ಯಾವುದೇ ರೀತಿಯ ಮಾರ್ಗದರ್ಶನ ನೀಡದೆ ತಮ್ಮಿಚ್ಛೆಯಂತೆ ಜೀವನ ಸಾಗಿಸಲು ಅಲ್ಲಾಹು ಅನುಮತಿ ನೀಡಿಲ್ಲ. ಜನರ ಪೈಕಿ ಅಲ್ಲಾಹು ಆರಿಸುವ ಪ್ರಾಮಾಣಿಕರೂ, ಸತ್ಯಸಂಧರೂ ಆಗಿರುವವರಿಗೆ ಅವನು ದಿವ್ಯಸಂದೇಶವನ್ನು ಅವತೀರ್ಣಗೊಳಿಸುವುದರ ಮೂಲಕ ಅವರನ್ನು ಪ್ರವಾದಿಗಳನ್ನಾಗಿ ಮಾಡಿ ಕಳುಹಿಸಿದನು. ವಾಸ್ತವವಾಗಿ ಇದು ಅಲ್ಲಾಹು ಜನರ ಮೇಲೆ ಮಾಡಿದ ಮಹಾ ಅನುಗ್ರಹವಾಗಿದೆ. ಇದು ಮಾನವ ಕುಲದ ಆರಂಭಕಾಲದಿಂದಲೇ ಅಲ್ಲಾಹು ಅನುಸರಿಸಿದ ಕ್ರಮವೂ ಆಗಿದೆ.

﴿ وَلَقَدْ بَعَثْنَا فِي كُلِّ أُمَّةٍ رَّسُولًا أَنِ ٱعْبُدُوا۟ ٱللَّهَ وَٱجْتَنِبُوا۟ ٱلطَّٰغُوتَ ﴾

**“ಅಲ್ಲಾಹನನ್ನು ಮಾತ್ರ ಆರಾಧಿಸಿರಿ ಮತ್ತು ಮಿಥ್ಯಾರಾಧ್ಯರನ್ನು ವರ್ಜಿಸಿರಿ ಎಂಬ ಸಂದೇಶದೊಂದಿಗೆ ನಾವು ಪ್ರತಿಯೊಂದು ಸಮುದಾಯಕ್ಕೂ ಸಂದೇಶವಾಹಕನನ್ನು ಕಳುಹಿಸಿದ್ದೇವೆ.”** [ಕುರ್‌ಆನ್ 16/36]

ಅಧರ್ಮವು ಅದರ ಪರಾಕಾಷ್ಠೆಗೆ ತಲುಪಿದಾಗ, ಸೃಷ್ಟಿಕರ್ತನಾದ ದೇವನನ್ನು ಅವಗಣಿಸಿ ಜನರು ಅನೇಕ ಮಿಥ್ಯ ಆರಾಧ್ಯರನ್ನು ಆರಾಧಿಸಲು ಆರಂಭಿಸಿದಾಗ, ಒಳಿತಿನ ಸ್ಥಾನದಲ್ಲಿ ಕೆಡುಕುಗಳು ವಿಜೃಂಭಿಸಿದಾಗ ಜನರನ್ನು ಸತ್ಯಮಾರ್ಗದೆಡೆಗೆ ಕರೆತರಲು ಅಲ್ಲಾಹು ತನ್ನ ದಿವ್ಯ ಸಂದೇಶದೊಂದಿಗೆ ಮನುಷ್ಯರಿಂದಲೇ ಪ್ರವಾದಿಗಳನ್ನು ಕಾಲಕಾಲಕ್ಕೂ ಕಳುಹಿಸುತ್ತಿದ್ದನು.

ಧರ್ಮಸಂಸ್ಥಾಪನೆಗಾಗಿ ದೇವನು ಮನುಷ್ಯಾವತಾರ ತಾಳುತ್ತಾನೆ ಎಂಬ ಮಿಥ್ಯಕಲ್ಪನೆಯು ಪ್ರವಾದಿಗಳ ಬಗ್ಗೆ ಹದ್ದು ಮೀರಿದ ಚಿಂತನೆಗಳಿಂದ ಮೂಡಿ ಬಂದದ್ದಾಗಿರಬಹುದು. ವಾಸ್ತವವಾಗಿ ಪ್ರವಾದಿಗಳು ಎಂದರೆ ಅವರು ಕೇವಲ ಬೋಧಕರು ಮಾತ್ರವಾಗಿರಬಾರದು. ಅವರು ತಾವು ನೀಡುವ ಬೋಧನೆಗಳನ್ನು ಮೊಟ್ಟಮೊದಲು ತಮ್ಮ ಜೀವನದಲ್ಲೇ ಅಳವಡಿಸಿಕೊಂಡು ಜನರಿಗೆ ಮಾದರಿಯಾಗಬೇಕಾಗಿದೆ. ಮಾನವ ಪ್ರಕೃತಿಗೆ ಮತ್ತು ಮಾನವ ಸ್ವಭಾವಕ್ಕೆ ಸೂಕ್ತವಾದ ತತ್ವಸಂಹಿತೆಗಳನ್ನು

ಮಾತ್ರ ನಾವು ಬೋಧಿಸುತ್ತಿದ್ದೇವೆ ಎಂಬುದನ್ನು ಅವರು ತಮ್ಮ ಜೀವನದ ಮೂಲಕ ಪ್ರಾಯೋಗಿಕಗೊಳಿಸಿ ತೋರಿಸಿಕೊಡಬೇಕಾಗಿದೆ. ಆದ್ದರಿಂದ ಅವರು ಮನುಷ್ಯರಿಂದಲೇ ಕಳುಹಿಸಲಾಗಬೇಕಾದುದು ಅನಿವಾರ್ಯವಾಗಿದೆ. ಮಾನವರಿಗೆ ಮಾರ್ಗದರ್ಶಕರಾಗಿ ಮನುಷ್ಯ ಪ್ರಕೃತಿಯಿಂದ ಸಂಪೂರ್ಣವಾಗಿ ಭಿನ್ನರಾಗಿರುವ ಮಲಕ್‌ಗಳೋ[1] ಅಥವಾ ಸಾಕ್ಷಾತ್ ದೇವನೋ ಮಾನವರೂಪ ತಾಳಿ ಅವರ ಮಧ್ಯೆ ಬದುಕಿದರೆ ಅದು ಪ್ರಾಯೋಗಿಕವೆನಿಸುವುದಿಲ್ಲ. ಮಲಕ್‌ಗಳ ಬದುಕು ಮಲಕ್‌ಗಳಿಗೆ ಮಾತ್ರ ಮಾದರಿಯಾದೀತೇ ಹೊರತು ಮಾನವರಿಗಲ್ಲ.

ದೇವನ ಬಗ್ಗೆ ಹೇಳುವುದಾದರೆ ಮನುಷ್ಯನಾಗಿ ಜನ್ಮವೆತ್ತುವುದು, ಮಾನವರೂಪ ತಾಳುವುದು ಅವನ ಪಾವಿತ್ರ್ಯತೆಗೆ, ಪರಿಶುದ್ಧತೆಗೆ ಮತ್ತು ಅವನ ಗುಣವಿಶೇಷಣಗಳಿಗೆ ಖಂಡಿತಾ ಯೋಗ್ಯವಾದುದಲ್ಲ. ಭ್ರೂಣಾವಸ್ಥೆಯಲ್ಲಿ, ಶೈಶವಾವಸ್ಥೆಯಲ್ಲಿ, ಬಾಲ್ಯಾವಸ್ಥೆಯಲ್ಲಿ, ವೃದ್ಧಾಪ್ಯದಲ್ಲಿ ಇನ್ನಿತರ ಹಂತಗಳಲ್ಲಿ ಮನುಷ್ಯರನ್ನೇ ಆಶ್ರಯಿಸಿ ಅವರನ್ನೇ ಅವಲಂಬಿಸಿ ಬದುಕಬೇಕಾದಂತಹ ದುರ್ಗತಿ ಪರಾವಲಂಬನೆಯಿಂದ ಪರಿಪೂರ್ಣವಾಗಿ ಮುಕ್ತನಾಗಿರುವ ದೇವನಿಗೆ ಉಂಟಾಗಬಾರದು. ಆಹಾರ ಸೇವನೆ, ನಿದ್ರೆ, ಪತ್ನಿ, ಸಂತತಿ ಇತ್ಯಾದಿಗಳನ್ನೆಲ್ಲ ಹೊಂದಿರುವ ದೇವನು ಸೂಕ್ಷ್ಮಜ್ಞಾನಿಯೋ, ಪರಾಶ್ರಯ ಮುಕ್ತನೋ ಆಗಲಾರನು. ಆದ್ದರಿಂದಲೇ ದೇವನು ಮಾನವ ರೂಪದಲ್ಲಿ ಅವತಾರ ತಾಳುವನು ಎಂಬ ಪರಿಕಲ್ಪನೆಯು ದೇವನ ಮಹಾತ್ಮೆಗೆ ಕಳಂಕ ಹಚ್ಚುವುದಾಗಿದೆ. ಆದ ಕಾರಣ ಅವತಾರವಾದವೆಂಬುದು ದೇವನ ಸೃಷ್ಟಿಗಳಾದ ಸಂದೇಶವಾಹಕರ ಮೇಲೆ ಜನರು ದಿವ್ಯತ್ವವನ್ನು ಆರೋಪಿಸುವ ಮೂಲಕ ಜಾರಿಗೆ ಬಂದದ್ದಾಗಿದೆ ಎಂಬುದೇ ವಾಸ್ತವ.

ದೇವವಿಶ್ವಾಸಿಗಳಾದ ಜನರು ದೇವನ ಬಗ್ಗೆ ಹೊಂದಿರುವ ಸರ್ವ ವಿಧ ಮಿಥ್ಯನಂಬಿಕೆಗಳನ್ನು, ತಪ್ಪುಕಲ್ಪನೆಗಳನ್ನು ಸಂದೇಶವಾಹಕರು ಗ್ರಂಥಗಳ ಮೂಲಕ ಸರಿಪಡಿಸಿದರು. ಅಲ್ಲಾಹನ ಬಗ್ಗೆ ನೈಜ ಜ್ಞಾನವನ್ನು ಅವರು ಮನುಷ್ಯರಿಗೆ ಧಾರೆಯೆರೆದು ಕೊಡುತ್ತಿದ್ದರು. ಆದರೂ ಕಾಲಕ್ರಮೇಣ ಪೈಶಾಚಿಕ ದುಷ್ಪ್ರೇರಣೆಗೊಳಗಾಗಿ ಮತ್ತು ತಮ್ಮ ದೇಹೇಚ್ಛೆಗಳನ್ನು ಅನುಸರಿಸಿ ದೇವನ ಬಗ್ಗೆ ಹಲವು ವಿಧದ ಮಿಥ್ಯನಂಬಿಕೆಗಳನ್ನೂ ದೇವಪರಿಕಲ್ಪನೆಗಳನ್ನೂ ಜನರು ಸ್ವತಃ ರೂಪಿಸಿಕೊಂಡರು.

ಪ್ರವಾದಿ ಮುಹಮ್ಮದ್(ﷺ)ರವರು ಸಂದೇಶವಾಹಕರ ಪೈಕಿ ಕಟ್ಟಕಡೆಯವರಾಗಿದ್ದಾರೆ. ಅವರಿಗಿಂತ ಮುಂಚೆ ನೋಹ, ಅಬ್ರಹಾಮ್, ಮೋಶೆ, ಯೇಸು (ಅವರೆಲ್ಲರ ಮೇಲೂ ಶಾಂತಿಯಿರಲಿ) ಮುಂತಾದ ಎಷ್ಟೋ ಸಂದೇಶವಾಹಕರು ಗತಿಸಿಹೋಗಿದ್ದಾರೆ. ಅವರೆಲ್ಲರಿಗೂ ಭಿನ್ನವಾಗಿ ಪ್ರವಾದಿ ಮುಹಮ್ಮದ್(ﷺ)ರವರು ಸಂಪೂರ್ಣ ಮನುಕುಲಕ್ಕೆ ಕಳುಹಿಸಲ್ಪಟ್ಟ ಪ್ರವಾದಿಯಾಗಿದ್ದಾರೆ. ಕುರ್‌ಆನ್ ಎಂಬುದು ಅವರ ಮೂಲಕ ಅಲ್ಲಾಹು ಅವತೀರ್ಣಗೊಳಿಸಿದ ಗ್ರಂಥವಾಗಿದೆ. ಅದು ಯಾವುದೇ ರೀತಿಯ ಹಸ್ತಕ್ಷೇಪಕ್ಕಾಗಲಿ,

1. **ಮಲಕ್:** ಅರ್ಥಾತ್ ದೇವದೂತ (angel)

ತಿದ್ದುಪಡಿಗಾಗಲಿ ಒಳಗಾಗದೆ ಅದರ ನೈಜ ರೂಪದಲ್ಲೇ ಇಂದಿಗೂ ನಮ್ಮ ಮುಂದಿದೆ.

ಪ್ರವಾದಿ ಮುಹಮ್ಮದ್(ﷺ)ರವರು ಓರ್ವ ಮನುಷ್ಯರಾದ ಸಂದೇಶವಾಹಕರಾಗಿದ್ದಾರೆ. ಅವರನ್ನು ದೇವನೆಂದಾಗಲಿ, ದೇವಾವತಾರವೆಂದಾಗಲಿ, ದೇವನ ಮಗನೆಂದಾಗಲಿ ಮುಸ್ಲಿಮರು ನಂಬುವುದಿಲ್ಲ. ಯಾರಾದರೂ ಅವರ ಬಗ್ಗೆ ದೇವನೆಂದೋ ದೇವಪುತ್ರನೆಂದೋ ದೇವಾವತಾರವೆಂದೋ ನಂಬಿಕೆಯಿಟ್ಟರೆ ಅವನಿಗೆ ಇಸ್ಲಾಮಿನಲ್ಲಿ ಯಾವುದೇ ಸ್ಥಾನವಿಲ್ಲ. ಅವನು ಇಸ್ಲಾಮಿನ ವರ್ತುಲದಿಂದ ಹೊರತಳ್ಳಲ್ಪಡುವನು.

ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ ಎಂಬುದು ಇಸ್ಲಾಮಿನ ಪ್ರಥಮ ಸಾಕ್ಷ್ಯವಚನವಾದರೆ ಮುಹಮ್ಮದ್(ﷺ)ರವರು ಅಲ್ಲಾಹನ ಸಂದೇಶವಾಹಕರಾಗಿದ್ದಾರೆ ಎಂಬುದು ದ್ವಿತೀಯ ಸಾಕ್ಷ್ಯವಚನವಾಗಿದೆ.

﴿ قُلْ إِنَّمَآ أَنَا۠ بَشَرٌ مِّثْلُكُمْ يُوحَىٰٓ إِلَىَّ أَنَّمَآ إِلَـٰهُكُمْ إِلَـٰهٌ وَٰحِدٌ ﴾

**“(ಓ ಪ್ರವಾದಿಯವರೇ!) ಹೇಳಿರಿ: ನಾನು ನಿಮ್ಮಂತಿರುವ ಓರ್ವ ಮನುಷ್ಯನು ಮಾತ್ರವಾಗಿರುವೆನು. ನಿಮ್ಮ ಆರಾಧ್ಯನು ಏಕಮೇವ ಆರಾಧ್ಯನಾಗಿರುವನೆಂದು ನನಗೆ ದಿವ್ಯ ಸಂದೇಶ ನೀಡಲಾಗುತ್ತಿದೆ.”** [ಕುರ್‌ಆನ್ 18/110]

ಎಂದು ಘೋಷಿಸುವಂತೆ ಅಲ್ಲಾಹು ಪ್ರವಾದಿ ಮುಹಮ್ಮದ್(ﷺ)ರಿಗೆ ಆಜ್ಞಾಪಿಸಿದ್ದನ್ನು ಕುರ್‌ಆನ್‌ನಲ್ಲಿ ನಮಗೆ ಕಾಣಲು ಸಾಧ್ಯವಿದೆ. ಪೂರ್ವಿಕ ಪ್ರವಾದಿಗಳ ಪೈಕಿ ಕೆಲವರನ್ನು ಅವರ ಅನುಯಾಯಿಗಳು ವರ್ಣಿಸಿದಂತೆ, ಮಿತಿಮೀರಿ ಹೊಗಳಿದಂತೆ ನೀವು ನನ್ನ ಬಗ್ಗೆ ಬಣ್ಣಿಸಕೂಡದು, ನಾನು ಅಲ್ಲಾಹನ ದಾಸ ಮತ್ತು ಸಂದೇಶವಾಹಕನು ಮಾತ್ರವಾಗಿದ್ದೇನೆ ಎಂದು ಮಾತ್ರ ನನ್ನ ಬಗ್ಗೆ ಹೇಳಿರಿ ಎಂದು ಪ್ರವಾದಿ ಮುಹಮ್ಮದ್(ﷺ)ರವರು ತಮ್ಮ ಅನುಯಾಯಿಗಳಿಗೆ ಉಪದೇಶಿಸಿದ್ದಾರೆ. ತನ್ನ ಗೋರಿಯನ್ನು ಪೂಜಾ ಸ್ಥಳವನ್ನಾಗಿ ಅಥವಾ ಉತ್ಸವಸ್ಥಳವನ್ನಾಗಿ ಮಾಡಕೂಡದೆಂದು ಮರಣಹೊಂದುವುದಕ್ಕಿಂತ ಕೆಲವು ದಿನಗಳ ಮುಂಚೆ ಹಲವು ಬಾರಿ ಅವರು ಎಚ್ಚರಿಕೆ ನೀಡಿದರು. ಯಾರಾದರೂ ಆ ರೀತಿ ಮಾಡಿದರೆ ಅವರು ಅಲ್ಲಾಹನ ಶಾಪಕ್ಕೆ ತುತ್ತಾಗಬೇಕಾದೀತೆಂದೂ ಅವರು ಮುನ್ನೆಚ್ಚರಿಕೆ ನೀಡಿದರು.

ಮುಸ್ಲಿಮರು ಪ್ರವಾದಿ ಮುಹಮ್ಮದ್(ﷺ)ರವರನ್ನು ಅಂತಿಮ ಪ್ರವಾದಿ ಮತ್ತು ಮಾದರೀ ವ್ಯಕ್ತಿಯೆಂಬ ನೆಲೆಯಲ್ಲಿ ಅತ್ಯಧಿಕ ಗೌರವಿಸುತ್ತಾರೆ. ಜಗತ್ತಿಗೆ ಕಳುಹಿಸಲ್ಪಟ್ಟ ಸರ್ವ ಪ್ರವಾದಿಗಳನ್ನು ಯಾವುದೇ ರೀತಿಯ ವ್ಯತ್ಯಾಸವಿಲ್ಲದೆ ಗೌರವಿಸುವಂತೆ ಕುರ್‌ಆನ್ ಆಜ್ಞಾಪಿಸಿದೆ. ಆದರೆ ಪ್ರವಾದಿ ಮುಹಮ್ಮದ್(ﷺ)ರವರನ್ನಾಗಲಿ ಇನ್ನಿತರ ಯಾವುದೇ ಪ್ರವಾದಿಗಳನ್ನಾಗಲಿ ದೈವಾಂಶ ಸಂಭೂತರೆಂದು ಕಲ್ಪಿಸುವುದಾಗಲಿ, ಅವರನ್ನು ಆರಾಧಿಸುವುದನ್ನಾಗಲಿ, ಅವರೊಂದಿಗೆ ಪ್ರಾರ್ಥಿಸುವುದನ್ನಾಗಲಿ ಮಾಡಕೂಡದು.

# ಮಿಥ್ಯಕಲ್ಪನೆಗಳು

ಮನುಷ್ಯರು ಮತ್ತು ಪಿಶಾಚಿಗಳು ಅಲ್ಲಾಹನ ಮೇಲೆ ಆರೋಪಿಸಿರುವ ಎಲ್ಲ ವಿಧ ತಪ್ಪುಕಲ್ಪನೆಗಳನ್ನೂ ಅಂತಿಮ ಗ್ರಂಥವಾದ ಕುರ್‌ಆನ್ ತಿದ್ದಿದೆ ಮತ್ತು ಅಲ್ಲಾಹನ ಗುಣವಿಶೇಷಣಗಳನ್ನು ಸ್ಪಷ್ಟವಾಗಿ ವಿವರಿಸಿದೆ. ಹಾಗೆಯೇ ಮಾನವರು ಅಲ್ಲಾಹನ ಮೇಲೆ ಆರೋಪಿಸಿರುವ ಸರ್ವ ನ್ಯೂನತೆಗಳಿಂದಲೂ ಅದು ಅವನನ್ನು ಪವಿತ್ರಗೊಳಿಸಿದೆ.

ಅಲ್ಲಾಹನ ಗುಣವಿಶೇಷಣಗಳನ್ನು ಅವನು ತಿಳಿಸಿಕೊಟ್ಟ ರೀತಿಯಲ್ಲಿ ಸ್ವೀಕರಿಸುವ ವಿನಾ ಮನುಷ್ಯನ ಭಾವನೆಗಳಿಗಾಗಲಿ ಅವನ ಇಚ್ಛೆಗಳಿಗಾಗಲಿ ಸರಿಹೊಂದುವಂತೆ ಪರಿಕಲ್ಪಿಸಲಾಗುವ ಯಾವುದೇ ಕಲ್ಪನೆಗಳಿಗೂ ಕಿಂಚಿತ್ತೂ ಪ್ರಾಮುಖ್ಯತೆಯಿಲ್ಲ. ಮನುಷ್ಯರು ಕೆಲವೊಮ್ಮೆ ದೇವನನ್ನು ಮಾನವನ ಮಟ್ಟಕ್ಕೂ ಇಳಿಸಿದ್ದಿದೆ. ಅದೇ ಸಮಯ ಮನುಷ್ಯನನ್ನು ದೇವನ ಮಟ್ಟಕ್ಕೇರಿಸಿದ್ದೂ ಇದೆ. ಮನುಷ್ಯನಿಗಿರುವ ನ್ಯೂನತೆ, ಅಸಾಮರ್ಥ್ಯ, ದೌರ್ಬಲ್ಯ, ವೈಕಲ್ಯಗಳನ್ನು ಮತ್ತು ಮನುಷ್ಯನ ಗುಣವಿಶೇಷಣಗಳನ್ನು ಅಲ್ಲಾಹನ ಮೇಲೆ ಆರೋಪಿಸಿ ಸೃಷ್ಟಿಕರ್ತನ ಅನುಪಮ ಸ್ಥಾನ, ಪದವಿ, ಔನ್ನತ್ಯವನ್ನು ಕಳಂಕಗೊಳಿಸಿದ್ದಾರೆ. ಅವರು ಅಲ್ಲಾಹನನ್ನು ಜನಸಾಮಾನ್ಯರಿಗೆ ಸಂಪರ್ಕ ಹೊಂದಲು ಸಾಧ್ಯವಿಲ್ಲದವನಾಗಿ ಚಿತ್ರಿಸಿದ್ದಾರೆ. ತರುವಾಯ ದೇವಸಾಮೀಪ್ಯ ಗಳಿಸಿಕೊಂಡವರೆಂದು ತಾವು ಭಾವಿಸುವ –ಊಹಿಸುವ– ಮಹಾತ್ಮರನ್ನು ಮತ್ತು ಪುಣ್ಯಪುರುಷರನ್ನು ಅಲ್ಲಾಹನ ಬಳಿಗಿರುವ ಶಿಫಾರಸ್ಸುಗಾರರನ್ನಾಗಿ ಮಾಡಿ ಅವರ ಮೂಲಕ ಅಲ್ಲಾಹನ ಸಾಮೀಪ್ಯಗಳಿಸಲು ಪ್ರಯತ್ನಿಸುತ್ತಾರೆ.

ಅದೇ ರೀತಿ ಸೃಷ್ಟಿಗಳಿಗೆ ಸೃಷ್ಟಿಕರ್ತನ ಶಕ್ತಿಯನ್ನು ಕಲ್ಪಿಸಿ ಅವರೊಂದಿಗೆ ಪ್ರಾರ್ಥಿಸಲು ಮತ್ತು ಅವರನ್ನು ಆರಾಧಿಸಲು ತೊಡಗುತ್ತಾರೆ. ಇನ್ನು ಕೆಲವರು ದೇವನು ಮನುಷ್ಯರಂತೆಯೇ ಸಂತತಿಯನ್ನು ಹೊಂದಿದವನೆಂದು ಕಲ್ಪಿಸಿಕೊಂಡು ತಮ್ಮ ಕಲ್ಪಿತ 'ಸಂತತಿ'ಯ ತೃಪ್ತಿ ಗಳಿಸಿ ಅಲ್ಲಾಹನಿಗೆ ನಿಕಟವಾಗಲು ಪ್ರಯತ್ನಿಸುತ್ತಾರೆ.

ಸರ್ವವಿಧದಲ್ಲೂ ಸೃಷ್ಟಿಗಿಂತ ಭಿನ್ನವಾಗಿರುವ ಸೃಷ್ಟಿಕರ್ತನ ಹೋಲಿಕೆರಹಿತ ಸತ್ವವನ್ನು ಸರ್ವ ಸೃಷ್ಟಿಗಳಲ್ಲೂ ಲೀನಗೊಂಡಿರುವ ಒಂದು ಶಕ್ತಿಯಾಗಿ ಅಥವಾ ಯಾವುದೋ ಜನರ ಮೇಲೆ ಅವತಾರ ಹೊಂದುವ ಒಂದಾಗಿ ಪರಿಕಲ್ಪಿಸಿಕೊಳ್ಳುವವರೂ ಇದ್ದಾರೆ. ಅವರು ಸೃಷ್ಟಿ ಮತ್ತು ಸೃಷ್ಟಿಕರ್ತ ಎರಡಲ್ಲ, ಒಂದೇ ಆಗಿದೆ ಎನ್ನುವ ಅದ್ವೈತವಾದಿಗಳಾಗಿದ್ದಾರೆ. ಹೀಗೆ ಸಕಲ ತಪ್ಪುಕಲ್ಪನೆಗಳನ್ನೂ, ಮಿಥ್ಯನಂಬಿಕೆಗಳನ್ನೂ ನಿವಾರಿಸುತ್ತಾ, ಅಲ್ಲಾಹನ ಪರಿಪಾವನತೆಯನ್ನು ಪರಿಚಯಿಸುವ, ಅವನ ಗುಣ ವಿಶೇಷಣಗಳನ್ನೂ, ಶಕ್ತಿಯನ್ನೂ, ದೃಷ್ಟಾಂತಗಳನ್ನೂ, ಸುಸ್ಪಷ್ಟವಾಗಿ ತಿಳಿಸಿಕೊಡುವ ಆದರಣೀಯ ಕುರ್‌ಆನ್ ಮತ್ತು ಅದರ ವ್ಯಾಖ್ಯಾನವಾದ ಪ್ರವಾದಿ ಮುಹಮ್ಮದ್(ﷺ)ರವರ ವಚನಗಳು ಮಾತ್ರ ಅಲ್ಲಾಹನ ಬಗ್ಗೆಯಿರುವ ನೈಜ ವಾಸ್ತವತೆಯನ್ನು ಗ್ರಹಿಸಲು ನಮಗಿರುವ ಏಕೈಕ ಮಾರ್ಗ.

## ಕುರ್‌ಆನ್ ಪರಿಚಯಿಸುವ ದೇವನು

﴿ ٱللَّهُ لَآ إِلَٰهَ إِلَّا هُوَ ٱلْحَىُّ ٱلْقَيُّومُ ۚ لَا تَأْخُذُهُۥ سِنَةٌ وَلَا نَوْمٌ ۚ لَّهُۥ مَا فِى ٱلسَّمَٰوَٰتِ وَمَا فِى ٱلْأَرْضِ ۗ مَن ذَا ٱلَّذِى يَشْفَعُ عِندَهُۥٓ إِلَّا بِإِذْنِهِۦ ۚ يَعْلَمُ مَا بَيْنَ أَيْدِيهِمْ وَمَا خَلْفَهُمْ ۖ وَلَا يُحِيطُونَ بِشَىْءٍ مِّنْ عِلْمِهِۦٓ إِلَّا بِمَا شَآءَ ۚ وَسِعَ كُرْسِيُّهُ ٱلسَّمَٰوَٰتِ وَٱلْأَرْضَ ۖ وَلَا يَـُٔودُهُۥ حِفْظُهُمَا ۚ وَهُوَ ٱلْعَلِىُّ ٱلْعَظِيمُ ﴿٢٥٥﴾ ﴾

**"ಅಲ್ಲಾಹು! ಅವನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ಅವನು ಎಂದೆಂದಿಗೂ ಬದುಕಿರುವವನು ಮತ್ತು ಅಸ್ತಿತ್ವದಲ್ಲಿರುವ ಎಲ್ಲವನ್ನೂ ಪರಿಪಾಲಿಸುವವನು ಮತ್ತು ಸಂರಕ್ಷಿಸುವವನಾಗಿರುವನು. ತೂಕಡಿಕೆಯಾಗಲಿ ನಿದ್ದೆಯಾಗಲಿ ಅವನನ್ನು ಬಾಧಿಸುವುದಿಲ್ಲ. ಆಕಾಶಗಳಲ್ಲಿರುವುದೆಲ್ಲವೂ ಮತ್ತು ಭೂಮಿಯಲ್ಲಿರುವುದೆಲ್ಲವೂ ಅವನಿಗೆ ಸೇರಿದ್ದಾಗಿವೆ. ಅವನ ಅನುಮತಿಯ ಹೊರತು ಅವನ ಬಳಿ ಶಿಫಾರಸ್ಸು ಮಾಡುವವನಾದರೂ ಯಾರು? ಇಹಲೋಕದಲ್ಲಿಯೂ ಪರಲೋಕದಲ್ಲಿಯೂ ಅವರಿಗೆ (ಅವನ ಸೃಷ್ಟಿಗಳಿಗೆ) ಏನಾಗಲಿದೆಯೆಂದು ಅವನು ಅರಿತಿದ್ದಾನೆ. ಅವರು ಅವನ ಅರಿವಿನಿಂದ ಏನನ್ನೂ ಸೂಕ್ಷ್ಮವಾಗಿ ಅರಿತುಕೊಳ್ಳಲಾರರು, ಅವನು ಇಚ್ಛಿಸಿದವುಗಳ ಹೊರತು. ಅವನ ಕುರ್ಸೀ[(2)] ಆಕಾಶಗಳ ಮತ್ತು ಭೂಮಿಯಷ್ಟು ವಿಶಾಲವಾಗಿದೆ. ಅವುಗಳ ಸಂರಕ್ಷಣೆಯು ಅವನನ್ನು ಕಿಂಚಿತ್ತೂ ದಣಿವಾಗಿಸುವುದಿಲ್ಲ. ಅವನು ಅತ್ಯುನ್ನತನೂ ಮಹಾನನೂ ಆಗಿದ್ದಾನೆ."** [ಕುರ್‌ಆನ್ 2/255]

ದೇವನನ್ನು ಕೇವಲ ಒಂದು 'ಶಕ್ತಿ'ಯಾಗಿ ಪರಿಚಯಿಸುವ ರೂಢಿಯಿದೆ. 'ನಿರ್ಗುಣ ಪರಮಾತ್ಮ' ಎಂದು ಹೇಳುವಂತೆ, ದೇವನ ಬಗ್ಗೆ ಯಾವುದೇ ಗುಣಗಳಿಲ್ಲದ ಕೇವಲ ಅಂಧವಾದ ಒಂದು ಶಕ್ತಿಯೆಂದು ಭಾವಿಸುವವರಿಗೆ ಅವನನ್ನು ಭಯಪಡಬೇಕಾಗಿಲ್ಲ.

2. **ಕುರ್ಸೀ:** ಇದರ ಭಾಷಿಕ ಅರ್ಥ ಪಾದಪೀಠ ಅಥವಾ ಕುರ್ಚಿ ಎಂದಾಗಿದೆ. ಕುರ್‌ಆನ್‌ನಲ್ಲಿ ಪ್ರಸ್ತಾಪಿಸಲಾಗಿರುವ (ಉದಾ: 7/54; 10/3; 85/15) ಅಲ್ಲಾಹನ ಅರ್ಶ್ (ಸಿಂಹಾಸನ) ಇದರಿಂದ ವ್ಯತಿರಿಕ್ತವಾಗಿದೆ. ಪ್ರವಾದಿ ಮುಹಮ್ಮದ್(ﷺ)ರವರು ಹೇಳಿದರು: 'ಅರ್ಶ್‌ನೊಂದಿಗೆ ಕುರ್ಸೀಯನ್ನು ಹೋಲಿಸಿದರೆ ಅದು ಬಯಲು ಮರುಭೂಮಿಯೊಂದರಲ್ಲಿ ಎಸೆಯಲಾದ ಉಂಗುರಕ್ಕೆ ಸಮಾನವಾಗಿದೆ.' ಅಲ್ಲಾಹನ ಕುರ್ಸೀ ಆಕಾಶ ಭೂಮಿಗಳಷ್ಟು ವಿಶಾಲವಾಗಿದ್ದರೆ ಅವನ ಅರ್ಶ್ (ಸಿಂಹಾಸನ) ಎಷ್ಟು ವಿಶಾಲವಾಗಿರಬಹುದು ಎಂದು ಇದರಿಂದ ಊಹಿಸಬಹುದು! ಅರ್ಶ್ ಮತ್ತು ಕುರ್ಸೀಯನ್ನು ಸೃಷ್ಟಿಸಿದ ಅಲ್ಲಾಹು ನಿಜಕ್ಕೂ ಮಹಾನನಾಗಿದ್ದಾನೆ. ಅಲ್ಲಾಹನ ಅರ್ಶ್ ಮತ್ತು ಕುರ್ಸೀಯಲ್ಲಿ ವಿಶ್ವಾಸವಿಡುವುದು ಕಡ್ಡಾಯವಾಗಿದೆ. ಪ್ರಸಿದ್ಧ ವಿದ್ವಾಂಸರಾದ ಮುಹಮ್ಮದ್ ಇಬ್ನ್ ಅಬ್ದಿಲ್ಲಾಹ್ ಹಾಗೂ ಮತ್ತಿತರ ವಿದ್ವಾಂಸರಿಂದ ವರದಿಯಾಗಿರುವಂತೆ ಕುರ್ಸೀ ಅರ್ಶ್‌ನ ಮುಂಭಾಗದಲ್ಲಿ ಪಾದದ ಸ್ಥಳದಲ್ಲಿದೆ. (ಫತಾವಾ ಇಬ್ನ್ ತೈಮಿಯ್ಯಃ 5/54–55)

ಯಾಕೆಂದರೆ ಅವರು ಅವನಿಗಿಂತ (ದೇವನಿಗಿಂತ) ಉನ್ನತರಾಗಿದ್ದಾರೆ. ಅವರಿಗೆ ವ್ಯಕ್ತಿತ್ವವಿದೆ, ಜೀವವಿದೆ, ಗುಣಗಳಿವೆ, ಚಿಂತಿಸುವ ಮತ್ತು ಗ್ರಹಿಸುವ ಶಕ್ತಿಯಿದೆ, ವಿಚಾರ–ವಿಕಾರಗಳಿವೆ. ಆದರೆ ಅವರ ಪರಿಕಲ್ಪನೆಯ ಪ್ರಕಾರ ದೇವನೆಂದರೆ ಜೀವವಿಲ್ಲದ, ವಿಚಾರ–ವಿಕಾರಗಳಿಲ್ಲದ, ಬುದ್ಧಿಯಾಗಲಿ, ಅರಿವಾಗಲಿ ಇಲ್ಲದ ಕೇವಲ ಒಂದು ನಿರ್ಗುಣ 'ಶಕ್ತಿ' ಮಾತ್ರವಾಗಿದೆ. ಹಾಗಿರುವಾಗ ಖಂಡಿತವಾಗಿಯೂ ಮನುಷ್ಯನು ದೇವನಿಗಿಂತ ಉನ್ನತನಾಗಿರುವನು! ಇದು ಮಾನವನ ಅಹಂಕಾರಕ್ಕೆ ಒತ್ತು ನೀಡುವ ದೇವಪರಿಕಲ್ಪನೆಯಾಗಿದೆ!

ಆದರೆ ಆದರಣೀಯ ಕುರ್‌ಆನ್ ಪರಿಚಯಿಸುವ ದೇವನು ಅರ್ಥಾತ್ 'ಅಲ್ಲಾಹು' ಖಂಡಿತವಾಗಿಯೂ ಇದಕ್ಕಿಂತ ಸಂಪೂರ್ಣ ಭಿನ್ನನಾಗಿದ್ದಾನೆ. ಜೀವಂತವಿರುವವನು; ಎಂದೆಂದಿಗೂ ಮರಣಹೊಂದದೆ ಜೀವಂತವಿರುವವನು;

﴿ وَتَوَكَّلْ عَلَى ٱلْحَىِّ ٱلَّذِى لَا يَمُوتُ وَسَبِّحْ بِحَمْدِهِۦ ﴾

**"ಎಂದೆಂದಿಗೂ ಮರಣಹೊಂದದೆ ಸದಾ ಬದುಕಿರುವವನ ಮೇಲೆ ಭರವಸೆಯಿಡಿರಿ ಮತ್ತು ಅವನ ಸ್ತುತಿಯೊಂದಿಗೆ ಅವನ ಪರಿಪಾವನತೆಯನ್ನು ಕೊಂಡಾಡಿರಿ."** [ಕುರ್‌ಆನ್ 25/58]

ಸೃಷ್ಟಿಗಳ ಜೀವಕ್ಕಿಂತಲೂ ಅವನ ಜೀವವು ಮತ್ತು ಸೃಷ್ಟಿಗಳ ಬದುಕಿಗಿಂತಲೂ ಅವನ ಬದುಕು ಸಂಪೂರ್ಣ ಭಿನ್ನವಾಗಿದೆ.

﴿ لَيْسَ كَمِثْلِهِۦ شَىْءٌ ﴾

**"ಅವನಿಗೆ ಹೋಲಿಕೆಯಾಗಿ ಯಾವುದೂ ಇಲ್ಲ"** [ಕುರ್‌ಆನ್ 42/11]

ಎಂಬುದು ಅವನ ಸರ್ವ ಗುಣಗಳಿಗೂ ಅನ್ವಯಿಸುತ್ತದೆ. ಅವನು ಪರಾಶ್ರಯಮುಕ್ತನು. ಸ್ವಯಂ ಪರ್ಯಾಪ್ತನು. ಎಲ್ಲರೂ ಅವನನ್ನು ಆಶ್ರಯಿಸುತ್ತಾರೆ, ಆದರೆ ಅವನಿಗೆ ಯಾರ, ಯಾವೊಂದರ ಆಶ್ರಯದ ಅಗತ್ಯವೂ ಇಲ್ಲ. ತೂಕಡಿಕೆ–ಯಾಗಲಿ ನಿದ್ದೆಯಾಗಲಿ ಬಾಧಿಸದೆ ಸದಾ ಎಲ್ಲವನ್ನೂ ಅರಿಯುತ್ತಾ, ಸರ್ವವನ್ನೂ ನಿಯಂತ್ರಿಸುತ್ತಾ, ಅವನು ಸದಾ ಎಚ್ಚರವಾಗಿದ್ದಾನೆ. ಆದ್ದರಿಂದಲೇ ಸೂರ್ಯ, ಚಂದ್ರ, ಭೂಮಿ ಮತ್ತು ಆಕಾಶಗಳಲ್ಲಿ ಅನಂತ ಕೋಟ್ಯಾನುಕೋಟಿ ನಕ್ಷತ್ರಗಳಲ್ಲಿ ಯಾವುದೇ ಒಂದು ಕೂಡ ಪರಸ್ಪರ ಘರ್ಷಿಸದೆ ಅತ್ಯಂತ ಸುವ್ಯವಸ್ಥಿತ ಹಾಗೂ ಸುರಕ್ಷಿತವಾದ ರೀತಿಯಲ್ಲಿ ಚಲಿಸುತ್ತಿವೆ.

﴿ إِنَّ ٱللَّهَ يُمۡسِكُ ٱلسَّمَٰوَٰتِ وَٱلۡأَرۡضَ أَن تَزُولَاۚ وَلَئِن زَالَتَآ إِنۡ أَمۡسَكَهُمَا مِنۡ أَحَدٖ مِّنۢ بَعۡدِهِۦٓۚ ﴾

**"ಖಂಡಿತವಾಗಿಯೂ ಆಕಾಶಗಳು ಮತ್ತು ಭೂಮಿಯು ಜಾರಿಹೋಗದಂತೆ ಅಲ್ಲಾಹು ಹಿಡಿದಿರುತ್ತಾನೆ. ಅವೇನಾದರೂ ಜಾರಿಹೋದರೆ ಅವನ ಹೊರತು ಅವುಗಳನ್ನು ಹಿಡಿದಿಡುವವರಾರೂ ಇಲ್ಲ."** [ಕುರ್‌ಆನ್ 35/41]

ಗುರುತ್ವಾಕರ್ಷಣಾ ಶಕ್ತಿಯ ಬಗ್ಗೆ, ಪ್ರಕೃತಿಯ ಬಗ್ಗೆ ಅನೇಕ ಸಿದ್ಧಾಂತಗಳನ್ನು ಆವಿಷ್ಕರಿಸಲು ನಮಗೆ ಸಾಧ್ಯವಿದೆ. ಆದರೆ ಆತ್ಯಂತಿಕವಾಗಿ ಎಲ್ಲ ವಸ್ತುಗಳೂ ಏಕೈಕನಾದ ಸೃಷ್ಟಿಕರ್ತನೆಡೆಗೆ ಬೆರಳು ತೋರುತ್ತವೆ. ಯಾವುದೇ ವಸ್ತುವಿಗೂ ಸ್ವಯಂ ಅಸ್ತಿತ್ವ ಹೊಂದಲು ಅಥವಾ ನೆಲೆನಿಲ್ಲಲು ಸಾಧ್ಯವಿಲ್ಲ. ಅತ್ಯಂತ ಚಿಕ್ಕ ವಸ್ತುವಿನಿಂದ ತೊಡಗಿ ಅತ್ಯಂತ ದೊಡ್ಡ ವಸ್ತುವಿನವರೆಗೆ ಎಲ್ಲ ವಸ್ತುಗಳಿಗೂ ಓರ್ವ 'ರಬ್ಬ್' (ಸೃಷ್ಟಿಸಿ ಪರಿಪಾಲಿಸಿ ಗುರಿಯೆಡೆಗೆ ಮುನ್ನಡೆಸುವ ಪ್ರಭು)ನ ಹೊರತು ಅಸ್ತಿತ್ವ ಹೊಂದಲು ಅಥವಾ ನೆಲೆನಿಲ್ಲಲು ಸಾಧ್ಯವೇ ಇಲ್ಲ. ಮನುಷ್ಯನಿಗೆ ತುದಿ ಕಾಣಲು ಸಾಧ್ಯವಾಗದ ಈ ಗೋಚರ ಪ್ರಪಂಚದ ಮತ್ತು ಅದರಾಚೆಗಿರುವ ಸರ್ವ ವಸ್ತುಗಳ ಸೃಷ್ಟಿಕರ್ತನೂ ಪರಿಪಾಲಕನೂ ಆಗಿರುವ ಅಲ್ಲಾಹನ ಅರಿವಿನಿಂದ, ಸಾಮರ್ಥ್ಯದಿಂದ ಮತ್ತು ನಿಯಂತ್ರಣದಿಂದ ಒಂದು ಪರಮಾಣುವಾಗಲಿ, ಅದಕ್ಕಿಂತಲೂ ಕಿರಿದಾದ ವಸ್ತುವಾಗಲಿ ಹೊರತಾಗಿಲ್ಲ.

'ಅಲ್ಲಾಹನ ಕುರ್ಸೀ ಆಕಾಶಗಳ ಮತ್ತು ಭೂಮಿಯಷ್ಟು ವಿಶಾಲವಾಗಿದೆ' ಎಂಬುದು ಅವನ ಅಧಿಕಾರ ವ್ಯಾಪ್ತಿಯನ್ನು ಸೂಚಿಸುತ್ತದೆ. ಈ ಜಗತ್ತಿನ ಸೃಷ್ಟಿಕರ್ತನು ಎಂಬಂತೆ ಅದನ್ನು ನಿಯಂತ್ರಿಸುವವನೂ ಅವನೇ ಆಗಿದ್ದಾನೆ. ಸೃಷ್ಟಿಸಲು ಓರ್ವ ದೇವ, ಪರಿಪಾಲಿಸಲು ಇನ್ನೋರ್ವ ದೇವ ಮತ್ತು ಸಂಹಾರ ಮಾಡಲು ಮತ್ತೋರ್ವ ದೇವ ಎಂದಲ್ಲ. ಅಂತಹ ತಪ್ಪು ಕಲ್ಪನೆಗಳನ್ನು ನಿವಾರಿಸಲು 'ಅವುಗಳ ಸಂರಕ್ಷಣೆಯು ಅವನನ್ನು ಕಿಂಚಿತ್ತೂ ದಣಿವಾಗಿಸುವುದಿಲ್ಲ' ಎಂದು ಹೇಳಲಾಗಿದೆ. ಈ ಅನಂತ ಕೋಟಿ ಕಾಯಗಳು ಚಲಿಸುತ್ತಿರುವುದು ವ್ಯತ್ಯಸ್ತ ದೇವರುಗಳ ನಿಯಂತ್ರಣದಲ್ಲಾಗಿದ್ದರೆ ಅರಾಜಕತೆಯಿಂದಾಗಿ ಅವು ಎಂದೋ ನಾಶವಾಗಬೇಕಿತ್ತು! ದೇವರುಗಳು ತಮ್ಮತಮ್ಮಲ್ಲಿ ಕೈಗೊಳ್ಳುವ ಸ್ಪರ್ಧೆಗಳು ಮತ್ತು ಅಧಿಕಾರ ಕಿತ್ತಾಟಗಳು ಈ ಲೋಕದ ಪರ್ಯಾವಸಾನದಲ್ಲಿ ಕೊನೆಗೊಳ್ಳುತ್ತಿದ್ದವು!

﴿ لَوۡ كَانَ فِيهِمَآ ءَالِهَةٌ إِلَّا ٱللَّهُ لَفَسَدَتَاۚ ﴾

**"ಅವೆರಡರಲ್ಲಿ (ಆಕಾಶಗಳು ಮತ್ತು ಭೂಮಿಯಲ್ಲಿ) ಅಲ್ಲಾಹನ ಹೊರತು ಅನ್ಯ ದೇವರುಗಳಿರುತ್ತಿದ್ದರೆ ಅವೆರಡೂ ನಾಶವಾಗಿ ಹೋಗುತ್ತಿದ್ದವು."** [ಕುರ್‌ಆನ್ 21/22]

ಎಂಬ ಕುರ್‌ಆನ್ ವಚನವು ದೇವನ ಏಕತ್ವವನ್ನು ಸಾಬೀತುಪಡಿಸುವ ಯುಕ್ತಿಪೂರ್ಣವಾದ ಪುರಾವೆಯಾಗಿದೆ.

## ಸೃಷ್ಟಿಯಲ್ಲಿ ಲಯಗೊಂಡಿಲ್ಲ

﴿ سَبَّحَ لِلَّهِ مَا فِي ٱلسَّمَٰوَٰتِ وَٱلْأَرْضِ ۖ وَهُوَ ٱلْعَزِيزُ ٱلْحَكِيمُ ﴿١﴾ لَهُۥ مُلْكُ ٱلسَّمَٰوَٰتِ وَٱلْأَرْضِ ۖ يُحْيِۦ وَيُمِيتُ ۖ وَهُوَ عَلَىٰ كُلِّ شَيْءٍ قَدِيرٌ ﴿٢﴾ هُوَ ٱلْأَوَّلُ وَٱلْءَاخِرُ وَٱلظَّٰهِرُ وَٱلْبَاطِنُ ۖ وَهُوَ بِكُلِّ شَيْءٍ عَلِيمٌ ﴿٣﴾ ﴾

**“ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅವನ ಪರಿಪಾವನತೆಯನ್ನು ಕೊಂಡಾಡುತ್ತವೆ. ಅವನು ಪ್ರತಾಪಶಾಲಿಯೂ ಯುಕ್ತಿಪೂರ್ಣನೂ ಆಗಿದ್ದಾನೆ. ಆಕಾಶಗಳ ಮತ್ತು ಭೂಮಿಯ ಆಧಿಪತ್ಯವು ಅವನಿಗೆ ಸೇರಿದ್ದಾಗಿದೆ. ಅವನು ಜೀವ ನೀಡುತ್ತಾನೆ ಮತ್ತು ಮೃತಪಡಿಸುತ್ತಾನೆ. ಅವನು ಸರ್ವ ವಿಷಯಗಳಲ್ಲೂ ಸಾಮರ್ಥ್ಯವುಳ್ಳವನಾಗಿದ್ದಾನೆ. ಅವನು ಆದಿಯೂ ಅಂತ್ಯವೂ ಆಗಿದ್ದಾನೆ. ಪ್ರತ್ಯಕ್ಷನೂ ಪರೋಕ್ಷನೂ ಆಗಿದ್ದಾನೆ. ಅವನು ಪ್ರತಿಯೊಂದು ವಿಷಯದ ಬಗ್ಗೆಯೂ ಅರಿವುಳ್ಳವನಾಗಿದ್ದಾನೆ.”** [ಕುರ್‌ಆನ್ 57/1–3]

ಸೃಷ್ಟಿಕರ್ತನಾದ ಅಲ್ಲಾಹನ ಸತ್ವವು ಅವನ ಸೃಷ್ಟಿಗಳಿಂದ ಬೇರ್ಪಟ್ಟು ನಿಂತಿದೆ. ಸೃಷ್ಟಿಯಲ್ಲಿ ಲಯಗೊಂಡು ಮುಕ್ತಿಹೊಂದಲು ಸಾಧ್ಯವಾಗದ ರೀತಿಯಲ್ಲಿ ಎಲ್ಲದರಲ್ಲೂ ವ್ಯಾಪಿಸಿರುವ ಒಂದು ಅಂಧವಾದ ಶಕ್ತಿ ಎಂಬ ನೆಲೆಯಲ್ಲಿ ದೇವನನ್ನು ಕಲ್ಪಿಸಿಕೊಳ್ಳುವುದು ದೇವನಿಷೇಧಕ್ಕೆ ಸಮಾನವಾಗಿದೆ. ಭೌತಿಕವಾದಿಗಳು ಪ್ರಕೃತಿ ಎನ್ನುವಾಗ ಉದ್ದೇಶಿಸುವುದರ ಮಧ್ಯೆ ಮತ್ತು ಅದ್ವೈತವಾದಿಗಳ ದೇವ ಪರಿಕಲ್ಪನೆಯ ಮಧ್ಯೆ ದೊಡ್ಡ ವ್ಯತ್ಯಾಸವೇನಿಲ್ಲ. ಆದರೆ ಅವರ ಈ ಪರಿಕಲ್ಪನೆಯು ವಾಸ್ತವಿಕವಾಗಿ ಅವರನ್ನು ಬಹುದೇವಾರಾಧನೆಯೆಡೆಗೆ ತಲುಪಿಸುತ್ತದೆ. ಎಲ್ಲ ವಸ್ತುಗಳಲ್ಲಿಯೂ ದೈವಿಕಾಂಶವು ಸೇರಿಕೊಂಡಿರುವುದರಿಂದ ಅವುಗಳಲ್ಲಿ ಏನನ್ನೇ ಆರಾಧಿಸಿದರೂ ಅದು ದೇವನಿಗಿರುವ ಆರಾಧನೆಯಾಗಿದೆಯೆಂದು ಅವರ ಪೈಕಿ ಕೆಲವರು ವಾದಿಸುತ್ತಾರೆ.

ಅಲ್ಲಾಹು ಅವನ ಸೃಷ್ಟಿಗಳಲ್ಲಿ ಲಯಗೊಂಡು ವ್ಯಾಪಿಸಿಲ್ಲ. ಅವನ ಸತ್ವವು ಸೃಷ್ಟಿಯಿಂದ ಬೇರ್ಪಟ್ಟು ನಿಂತಿದೆ. ಆದರೆ ಅವನ ಅರಿವು ಮತ್ತು ಸಾಮರ್ಥ್ಯವು ಸರ್ವವನ್ನೂ ಆವರಿಸಿಕೊಂಡಿದೆ. ಸ್ಥಳಕಾಲಗಳಿಗೆ ಅತೀತನಾಗಿರುವ ಅಲ್ಲಾಹು ನೀವೆಲ್ಲೇ ಇದ್ದರೂ ನಿಮ್ಮೊಂದಿಗಿರುವನು. ಭೂಮಿಯ ಅಂತರ್ಭಾಗಗಳಲ್ಲೇ ಆಗಲಿ, ಆಕಾಶಗಳ

ಅನಂತತೆಯಲ್ಲೇ ಆಗಲಿ ಅವನ ಅರಿವು ಮತ್ತು ಸಾಮರ್ಥ್ಯದಿಂದ ಏನೊಂದೂ ಹೊರತಾಗಿಲ್ಲ.

ಈ ಪ್ರಪಂಚಕ್ಕೆ ಒಂದು ಆದಿಯಿದೆ. ಅದು ಅನಾದಿಯಲ್ಲ. ಯಾರ ಅಪ್ಪಣೆ ಪ್ರಕಾರ ಈ ಜಗತ್ತು ಅಸ್ತಿತ್ವಕ್ಕೆ ಬಂದಿದೆಯೋ ಅವನು ಅನಾದಿಯಾಗಿದ್ದಾನೆ. ಎಲ್ಲವೂ ನಶ್ವರ, ಅನಶ್ವರನು ಅವನು ಮಾತ್ರ. ಅವನು ತನ್ನ ದೃಷ್ಟಾಂತಗಳ ಮೂಲಕ ಗೋಚರನು. ವಾಸ್ತವಿಕವಾಗಿ ಅವನು ಅಗೋಚರನು. ಅಗೋಚರನಾದ ಆ ಸೃಷ್ಟಿಕರ್ತನು, ಪ್ರಪಂಚ ಪರಿಪಾಲಕನಾದ ಅಲ್ಲಾಹು, ಅವನು ಮಾತ್ರವೇ ದೇವನು; ಅವನು ಮಾತ್ರವೇ ಆರಾಧ್ಯನು, ಅವನನ್ನು ನೇರವಾಗಿ, ಮಧ್ಯವರ್ತಿಗಳಿಲ್ಲದೆ, ಯಾವುದೇ ಪ್ರತಿಮೆಯೂ ಇಲ್ಲದೆ ಆರಾಧಿಸಬೇಕು.

﴿ وَمِنْ ءَايَـٰتِهِ ٱلَّيْلُ وَٱلنَّهَارُ وَٱلشَّمْسُ وَٱلْقَمَرُ ۚ لَا تَسْجُدُوا۟ لِلشَّمْسِ وَلَا لِلْقَمَرِ وَٱسْجُدُوا۟ لِلَّهِ ٱلَّذِى خَلَقَهُنَّ إِن كُنتُمْ إِيَّاهُ تَعْبُدُونَ ﴿٣٧﴾ ﴾

**"ರಾತ್ರಿ, ಹಗಲು, ಸೂರ್ಯ, ಚಂದ್ರ ಅವನ ದೃಷ್ಟಾಂತಗಳಲ್ಲಿ ಸೇರಿದ್ದಾಗಿವೆ. ಸೂರ್ಯನಿಗೋ ಚಂದ್ರನಿಗೋ ನೀವು ಸಾಷ್ಟಾಂಗ ಮಾಡಕೂಡದು. ಅವುಗಳನ್ನು ಸೃಷ್ಟಿಸಿದ ಅಲ್ಲಾಹನಿಗೆ ಸಾಷ್ಟಾಂಗ ಮಾಡಿರಿ. ನೀವು ಅವನನ್ನು ಮಾತ್ರ ಆರಾಧಿಸುವವರಾಗಿದ್ದರೆ."** [ಕುರ್‌ಆನ್ 41/37]

## ತಂದೆಯೂ ಅಲ್ಲ; ಮಗನೂ ಅಲ್ಲ

ದೇವನನ್ನು ತಂದೆ ಮತ್ತು ಮಗನೆಂದು ಪರಿಕಲ್ಪಿಸಿಕೊಳ್ಳುವುದನ್ನು ಕುರ್‌ಆನ್ ಕಠಿಣವಾಗಿ ವಿರೋಧಿಸಿದೆ. ಕುರ್‌ಆನ್‌ನ ಅತಿಚಿಕ್ಕ ಅಧ್ಯಾಯವೊಂದರಲ್ಲಿರುವ ಆಶಯವನ್ನು ಇಲ್ಲಿ ನೀಡುತ್ತಿದ್ದೇನೆ:

﴿ قُلْ هُوَ ٱللَّهُ أَحَدٌ ﴿١﴾ ٱللَّهُ ٱلصَّمَدُ ﴿٢﴾ لَمْ يَلِدْ وَلَمْ يُولَدْ ﴿٣﴾ وَلَمْ يَكُن لَّهُۥ كُفُوًا أَحَدٌۢ ﴿٤﴾ ﴾

**"ಹೇಳಿರಿ: ಅವನು ಅಲ್ಲಾಹು; ಏಕೈಕನು. ಅವನು ನಿರಪೇಕ್ಷನೂ ಸರ್ವರಿಗೂ ಆಶ್ರಯದಾತನೂ ಆಗಿದ್ದಾನೆ. ಅವನು ಯಾರಿಗೂ ಜನ್ಮ ನೀಡಿಲ್ಲ; ಅವನು ಜನಿಸಿದವನೂ ಅಲ್ಲ. ಅವನಿಗೆ ಸರಿಸಾಟಿಯಾಗಿ ಯಾರೂ ಇಲ್ಲ."** [ಕುರ್‌ಆನ್ ಅಧ್ಯಾಯ 112]

ಅಲ್ಲಾಹನ ಹೋಲಿಕೆರಾಹಿತ್ಯ ಮತ್ತು ಏಕತ್ವವು ಅವನ ಸತ್ವಕ್ಕೆ, ವಿಶೇಷಣಕ್ಕೆ ಮತ್ತು ಪ್ರವೃತ್ತಿಗೆ ಎಲ್ಲದಕ್ಕೂ ಅನ್ವಯಿಸುತ್ತದೆ. ಅವನಿಗೆ ಯಾವುದೇ ಸಂತತಿಯೂ ಇಲ್ಲ; ಅವನು ಯಾರ ಸಂತಾನವೂ ಅಲ್ಲ. ಮಕ್ಕಳಿಗೆ ತಂದೆಯ ಗುಣವಿಶೇಷಣಗಳು ಮತ್ತು ಸಾಮರ್ಥ್ಯ ಹೆಚ್ಚು ಕಮ್ಮಿಯಾಗುವ ಸಾಧ್ಯತೆಯಿರುತ್ತದೆ. ಅಂದರೆ ಕೆಲವೊಮ್ಮೆ ಕೆಲವು ವಿಷಯಗಳಲ್ಲಿ ಮಕ್ಕಳಿಗೆ ತಂದೆಗಿಂತಲೂ ಹೆಚ್ಚಿನ ಸಾಮರ್ಥ್ಯಗಳು ಇರಬಹುದು. ಯಾರನ್ನೇ ಆದರೂ 'ಅಲ್ಲಾಹನ ಪುತ್ರ' ಎಂದು ಅಲಂಕಾರಿಕವಾಗಿ ಕರೆಯಲು ಕೂಡ ಕುರ್‌ಆನ್ ಅನುಮತಿ ನೀಡುವುದಿಲ್ಲ.

﴿ وَقَالُوا اتَّخَذَ الرَّحْمَٰنُ وَلَدًا ﴿٨٨﴾ لَّقَدْ جِئْتُمْ شَيْئًا إِدًّا ﴿٨٩﴾ تَكَادُ
السَّمَاوَاتُ يَتَفَطَّرْنَ مِنْهُ وَتَنشَقُّ الْأَرْضُ وَتَخِرُّ الْجِبَالُ هَدًّا ﴿٩٠﴾ أَن دَعَوْا لِلرَّحْمَٰنِ
وَلَدًا ﴿٩١﴾ وَمَا يَنبَغِي لِلرَّحْمَٰنِ أَن يَتَّخِذَ وَلَدًا ﴿٩٢﴾ ﴾

**"ಅವರು ಹೇಳಿದರು: 'ಪರಮ ದಯಾಮಯನು (ಅಲ್ಲಾಹು) ಸಂತತಿಯನ್ನು ಮಾಡಿಕೊಂಡಿದ್ದಾನೆ.' ಪರಮ ದಯಾಮಯನಿಗೆ ಒಂದು ಸಂತತಿಯಿದೆಯೆಂದು ವಾದಿಸುವ ಮೂಲಕ ಆಕಾಶಗಳು ಹರಿದು ಹಂಚಾಗಿ ಹೋಗುವಂತಹ, ಭೂಮಿಯು ಒಡೆದು ಚೂರಾಗಿ ಹೋಗುವಂತಹ ಮತ್ತು ಪರ್ವತಗಳು ಸಿಡಿದು ನಾಶವಾಗುವಂತಹ ಒಂದು ಭೀಕರ ಪಾಪವನ್ನು ಖಂಡಿತವಾಗಿಯೂ ನೀವು ತಂದಿರುವಿರಿ. ಸಂತತಿಯನ್ನು ಮಾಡಿಕೊಳ್ಳುವುದು ಪರಮ ದಯಾಮಯನಿಗೆ ಯುಕ್ತವಾದುದಲ್ಲ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಪರಮ ದಯಾಮಯನ ಬಳಿಗೆ ದಾಸರಾಗಿಯೇ ವಿನಾ ಬರಲಾರರು."** [ಕುರ್‌ಆನ್ 19/88–92]

ದೇವನಿಗೆ ಸಂತಾನವಿದೆ ಎಂದು ಆರೋಪಿಸುವವರಿಗೆ ಮುನ್ನೆಚ್ಚರಿಕೆ ನೀಡುವುದು ಕೂಡ ಕುರ್‌ಆನ್‌ನ ಅವತೀರ್ಣ ಹಿನ್ನೆಲೆಗಳ ಪೈಕಿ ಸೇರಿದ ಒಂದು ಕಾರಣವಾಗಿದೆ. ಕುರ್‌ಆನ್‌ನ ಅವತೀರ್ಣ ಹಿನ್ನೆಲೆಯ ಬಗ್ಗೆ ಅಲ್ಲಾಹು ಹೇಳಿದ್ದಾನೆ:

﴿ وَيُنذِرَ الَّذِينَ قَالُوا اتَّخَذَ اللَّهُ وَلَدًا ﴿٤﴾ مَّا لَهُم بِهِ مِنْ عِلْمٍ وَلَا
لِآبَائِهِمْ ۚ كَبُرَتْ كَلِمَةً تَخْرُجُ مِنْ أَفْوَاهِهِمْ ۚ إِن يَقُولُونَ إِلَّا كَذِبًا ﴿٥﴾ ﴾

**"ಅಲ್ಲಾಹು ಒಂದು ಸಂತತಿಯನ್ನು ಮಾಡಿಕೊಂಡಿದ್ದಾನೆ ಎಂದು ಹೇಳುವವರಿಗೆ ಮುನ್ನೆಚ್ಚರಿಕೆ ನೀಡುವ ಸಲುವಾಗಿ. ಅದರ ಬಗ್ಗೆ ಅವರಿಗೆ ಯಾವುದೇ ತಿಳುವಳಿಕೆಯೂ**

**ಇಲ್ಲ. ಅವರ ಪೂರ್ವಿಕರಿಗೂ ಇಲ್ಲ. ಅವರ ಬಾಯಿಯಿಂದ ಹೊರಹೊಮ್ಮುವ ಮಾತುಗಳು ಭೀಕರವಾಗಿವೆ. ಅವರು ಸುಳ್ಳನ್ನು ಹೊರತು ಹೇಳುವುದೇ ಇಲ್ಲ.”** [ಕುರ್‌ಆನ್ 18/4–5]

‘ದೇವಪುತ್ರ’ ಎಂಬುದು ಅಲಂಕಾರಿಕ ರೂಪದಲ್ಲಿ ಕೂಡ ಹೇಳಕೂಡದಾಗಿರುವ ಒಂದು ಪ್ರಯೋಗವಾಗಿದೆ. ಸೃಷ್ಟಿಗಳು ಎಷ್ಟೇ ಉನ್ನತಿಗೇರಿದರೂ ‘ಅಲ್ಲಾಹನ ದಾಸ’ ಎಂಬ ನೆಲೆಯಲ್ಲಿ ಹೊರತು ಅಲ್ಲಾಹನೊಂದಿಗೆ ಬೇರೊಂದು ಸಂಬಂಧವು ಅವನಿಗೆ ಇರಕೂಡದು. ಅಲ್ಲಾಹನ ಅನುಮತಿ ಪ್ರಕಾರ ಅಸ್ತಿತ್ವಕ್ಕೆ ಬಂದು, ಅಸ್ತಿತ್ವವನ್ನು ಹೊಂದಿರುವ ತರುವಾಯ ಅವನ ಅನುಮತಿ ಪ್ರಕಾರವೇ ನಾಶವಾಗುವ ಅಲ್ಲಾಹನ ಸೃಷ್ಟಿಯನ್ನು ಅವನ ಪುತ್ರನೆಂದು ವಾದಿಸಕೂಡದು. ಪುತ್ರನಿಗೆ ತಂದೆಯ ಮೇಲೆ ನಿಯಂತ್ರಣ, ಹಕ್ಕು ಮತ್ತು ಕೆಲವೊಮ್ಮೆ ಅಧಿಕಾರವೂ ಇರುತ್ತದೆ. ತಂದೆಯನ್ನು ವಿಶ್ರಾಂತಿಗೆ ಕಳಿಸಿ ಅಧಿಕಾರ ಮತ್ತು ನಿಯಂತ್ರಣವನ್ನು ಪೂರ್ಣವಾಗಿ ವಶಪಡಿಸಲೂ ಮಗನಿಗೆ ಸಾಧ್ಯವಿದೆ. ‘ದೇವಪುತ್ರ’ ಎಂಬ ಪರಿಕಲ್ಪನೆಯ ಫಲಿತಾಂಶವು ಅಲ್ಲಾಹನಿಗೆ ಸರಿಸಾಟಿಯನ್ನು ಅಥವಾ ಕೆಲವೊಮ್ಮೆ ಅವನಿಗಿಂತಲೂ ಉನ್ನತನಾಗಿರುವವನನ್ನು ಆರೋಪಿಸುವುದಾಗಿದೆ. ಅಲ್ಲಾಹನ ಪರಮಪಾವನತೆಗೆ, ಹೋಲಿಕೆಯಿಲ್ಲದಿರುವಿಕೆಗೆ ಮತ್ತು ಏಕತ್ವಕ್ಕೆ ಸ್ವಲ್ಪವೂ ಹೊಂದಿಕೊಳ್ಳದ ‘ದೇವಪುತ್ರ’ ಎಂಬ ಪರಿಕಲ್ಪನೆಯನ್ನು ಕುರ್‌ಆನ್ ಅತ್ಯಂತ ಕಠೋರವಾಗಿ ನಿರಾಕರಿಸುತ್ತದೆ; ಪುನರಾವರ್ತಿಸಿ ಖಂಡಿಸುತ್ತದೆ:

﴿وَقَالُوا۟ ٱتَّخَذَ ٱللَّهُ وَلَدًا ۗ سُبْحَـٰنَهُۥ ۖ بَل لَّهُۥ مَا فِى ٱلسَّمَـٰوَٰتِ وَٱلْأَرْضِ ۖ كُلٌّ لَّهُۥ قَـٰنِتُونَ ﴿١١٦﴾ بَدِيعُ ٱلسَّمَـٰوَٰتِ وَٱلْأَرْضِ ۖ وَإِذَا قَضَىٰٓ أَمْرًا فَإِنَّمَا يَقُولُ لَهُۥ كُن فَيَكُونُ ﴿١١٧﴾﴾

**“ಅವರು ಹೇಳಿದರು: ‘ಅಲ್ಲಾಹು ಒಂದು ಸಂತತಿಯನ್ನು ಮಾಡಿಕೊಂಡಿದ್ದಾನೆ.’ ಅವನು ಪರಮಪಾವನನು! ಅಲ್ಲ, ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅವನದ್ದಾಗಿವೆ. ಎಲ್ಲವೂ ಅವನಿಗೆ ವಿಧೇಯತೆಯೊಂದಿಗೆ ಶರಣಾಗಿವೆ. ಆಕಾಶಗಳನ್ನು ಮತ್ತು ಭೂಮಿಯನ್ನು ಪೂರ್ವ ಮಾದರಿಯಿಲ್ಲದೆ ಸೃಷ್ಟಿಸಿದವನು. ಅವನು ಯಾವುದೇ ಕಾರ್ಯವನ್ನು ತೀರ್ಮಾನಿಸಿದರೆ ಅದರೊಂದಿಗೆ ಕೇವಲ ಉಂಟಾಗು ಎಂದು ಮಾತ್ರ ಹೇಳುವನು. ತಕ್ಷಣ ಅದುಂಟಾಗುವುದು.”** [ಕುರ್‌ಆನ್ 2/116–117]

## ಪರಮ ದಯಾಮಯ ಮತ್ತು ಕರುಣಾಮಯಿ

﴿ هُوَ ٱللَّهُ ٱلَّذِى لَآ إِلَٰهَ إِلَّا هُوَ ۖ عَٰلِمُ ٱلْغَيْبِ وَٱلشَّهَٰدَةِ ۖ هُوَ ٱلرَّحْمَٰنُ ٱلرَّحِيمُ ﴿٢٢﴾ ﴾

**"ಅವನು ಅಲ್ಲಾಹು; ಅವನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ಅಗೋಚರವಾಗಿರುವುದನ್ನು ಮತ್ತು ಗೋಚರವಾಗಿರುವುದನ್ನು ಅವನು ಅರಿಯುತ್ತಾನೆ. ಅವನು ಪರಮ ದಯಾಮಯನೂ ಕರುಣಾಮಯಿಯೂ ಆಗಿದ್ದಾನೆ."** [ಕುರ್‌ಆನ್ 59/22]

ನೈಜ ಆರಾಧ್ಯನು ಉತ್ತಮವಾದ ಅನೇಕ ಹೆಸರುಗಳಿಂದ ಅರಿಯಲ್ಪಡುತ್ತಾನೆ. ಆ ಹೆಸರುಗಳು ಅವನ ಗುಣವಿಶೇಷಣಗಳನ್ನು ಪ್ರತಿನಿಧಿಸುತ್ತವೆ. ಆ ಹೆಸರುಗಳನ್ನೇ ವಿಭಿನ್ನ ಆರಾಧ್ಯಗಳನ್ನಾಗಿ ಪರಿಕಲ್ಪಿಸುವ ಮಹಾ ಪ್ರಮಾದವೊಂದು ಅನೇಕ ಸಮುದಾಯಗಳಲ್ಲಿ ಅಸ್ತಿತ್ವದಲ್ಲಿದೆ. ಕುರ್‌ಆನಿನಲ್ಲಿ ಅತ್ಯಧಿಕವಾಗಿ ಪುನರಾವರ್ತಿಸಲಾಗುವ ಎರಡು ಪವಿತ್ರ ಹೆಸರುಗಳಾಗಿವೆ 'ರಹ್ಮಾನ್' ಮತ್ತು 'ರಹೀಮ್'. ಅರ್ಥಾತ್ ಪರಮ ದಯಾಮಯ ಮತ್ತು ಪರಮ ಕರುಣಾಳು.

ಆದರಣೀಯ ಕುರ್‌ಆನಿನಲ್ಲಿ 'ಅರ್ರಹ್ಮಾನ್' ಎಂಬ ಒಂದು ಅಧ್ಯಾಯವೇ ಇದೆ. ಅದು ಹೀಗೆ ಆರಂಭವಾಗುತ್ತದೆ:

﴿ ٱلرَّحْمَٰنُ ﴿١﴾ عَلَّمَ ٱلْقُرْءَانَ ﴿٢﴾ خَلَقَ ٱلْإِنسَٰنَ ﴿٣﴾ عَلَّمَهُ ٱلْبَيَانَ ﴿٤﴾ ﴾

**"ಪರಮ ದಯಾಮಯನು; ಅವನು ಕುರ್‌ಆನನ್ನು ಕಲಿಸಿದನು; ಮನುಷ್ಯನನ್ನು ಸೃಷ್ಟಿಸಿದನು; ಅವನಿಗೆ ಮಾತು ಕಲಿಸಿಕೊಟ್ಟನು."** [ಕುರ್‌ಆನ್ 55/1–4]

ಅವನು ಮನುಷ್ಯರನ್ನು ಸೃಷ್ಟಿಸಿರುವುದು, ಅವರಿಗೆ ವಿಚಾರ ವಿನಮಯ ಮಾಡುವ ಸಾಮರ್ಥ್ಯವನ್ನು ಒದಗಿಸಿರುವುದು, ಅವರಿಗೆ ಸತ್ಯಮಾರ್ಗವನ್ನು ತೋರಿಸಿಕೊಡಲು ಪ್ರವಾದಿಗಳನ್ನು ಕಳುಹಿಸಿರುವುದು, ಗ್ರಂಥಗಳನ್ನು ಅವತೀರ್ಣಗೊಳಿಸಿರುವುದು ಮತ್ತು ಕೊನೆಯದಾಗಿ, ಅಂತಿಮ ಗ್ರಂಥವಾದ ಕುರ್‌ಆನನ್ನು ಅವತೀರ್ಣಗೊಳಿಸಿರುವುದು –ಇವೆಲ್ಲವೂ ಅವನ ಅಪಾರ ಕರುಣೆಯಿಂದಲೇ ಆಗಿದೆ. ಅವನು ಒದಗಿಸಿದಂತಹ ಅನುಗ್ರಹಗಳನ್ನು ಎಣಿಸುವುದಾದರೆ ಅವುಗಳನ್ನು ಎಣಿಕೆ ಮಾಡಲು ಖಂಡಿತ

ಸಾಧ್ಯವಿಲ್ಲ. ಜಗತ್ತಿನ ಸರ್ವ ಜೀವರಾಶಿಗಳಲ್ಲಿರುವ ಕರುಣೆಯನ್ನು ಒಟ್ಟುಗೂಡಿಸಿದರೆ ಅದು ಅಲ್ಲಾಹನ ಕರುಣೆಯ ಅಲ್ಪಾಂಶದಷ್ಟು ಮಾತ್ರವಾಗಿರುತ್ತದೆ ಎಂದು ಪ್ರವಾದಿ ಮುಹಮ್ಮದ್(ﷺ)ರವರು ನಮಗೆ ಕಲಿಸಿಕೊಟ್ಟಿದ್ದಾರೆ.

ಪರಮ ದಯಾಮಯನು ಮನುಷ್ಯರ ಪಾಪಗಳನ್ನು ಕ್ಷಮಿಸಲು ಮತ್ತು ಅವರ ಪಶ್ಚಾತ್ತಾಪವನ್ನು ಸ್ವೀಕರಿಸಿ ಅವರನ್ನು ಅನುಗ್ರಹಿಸಲು ಸದಾ ತತ್ಪರನಾಗಿರುವನು. ಪ್ರವಾದಿ ಮುಹಮ್ಮದ್(ﷺ)ರವರ ಕಾಲದ ಮಕ್ಕಾ ಬಹುದೇವವಿಶ್ವಾಸಿಗಳು ಅಲ್ಲಾಹನಲ್ಲಿ ವಿಶ್ವಾಸವಿಟ್ಟಿದ್ದರು. ಆದರೆ ಅಲ್ಲಾಹನ ಈ ವಿಶೇಷಣವನ್ನು ಅಂದರೆ 'ಪರಮ ದಯಾಮಯ' ಎಂಬ ಹೆಸರನ್ನು ಒಪ್ಪಿಕೊಳ್ಳಲು ಅವರು ಸಿದ್ಧರಿರಲಿಲ್ಲ. ಯಾಕೆಂದರೆ ಅಲ್ಲಾಹು ಪರಮ ದಯಾಮಯನಾಗಿದ್ದರೆ ತರುವಾಯ ಅಲ್ಲಾಹನ ಹೊರತು ಅವರು ಕರೆದು ಪ್ರಾರ್ಥಿಸುತ್ತಿದ್ದ ಮಧ್ಯವರ್ತಿಗಳ ಅಗತ್ಯವೇ ಕಂಡುಬರುವುದಿಲ್ಲ. ಪಾಪಿಗಳಾದ ತಮ್ಮೊಂದಿಗೆ ಅಲ್ಲಾಹನಿಗೆ ಅತ್ಯಂತ ಕ್ರೋಧ ಮತ್ತು ದ್ವೇಷವಿರುವುದರಿಂದ ಅವನು ತಮ್ಮೊಂದಿಗೆ ಎಂದೂ ಕರುಣೆ ತೋರಲಾರನು ಎಂದೇ ಅವರು ಭಾವಿಸಿಕೊಂಡಿದ್ದರು. ಆದರೆ ಅಲ್ಲಾಹು ಹೀಗೆ ಘೋಷಿಸುತ್ತಾನೆ:

﴿ ۞ قُلْ يَٰعِبَادِىَ ٱلَّذِينَ أَسْرَفُوا۟ عَلَىٰٓ أَنفُسِهِمْ لَا تَقْنَطُوا۟ مِن رَّحْمَةِ ٱللَّهِ ۚ إِنَّ
ٱللَّهَ يَغْفِرُ ٱلذُّنُوبَ جَمِيعًا ۚ إِنَّهُۥ هُوَ ٱلْغَفُورُ ٱلرَّحِيمُ ﴿٥٣﴾ وَأَنِيبُوٓا۟ إِلَىٰ رَبِّكُمْ
وَأَسْلِمُوا۟ لَهُۥ مِن قَبْلِ أَن يَأْتِيَكُمُ ٱلْعَذَابُ ثُمَّ لَا تُنصَرُونَ ﴿٥٤﴾ ﴾

**"(ಓ ಪ್ರವಾದಿಯವರೇ! ಅಲ್ಲಾಹು ಹೀಗೆನ್ನುತ್ತಾನೆಂದು) ಹೇಳಿರಿ: ಸ್ವತಃ ತಮ್ಮ ಮೇಲೆಯೇ ಅನ್ಯಾಯವೆಸಗಿದ ಓ ನನ್ನ ದಾಸರೇ! ಅಲ್ಲಾಹನ ಕರುಣೆಯ ಬಗ್ಗೆ ನೀವು ನಿರಾಶರಾಗಕೂಡದು. ಖಂಡಿತವಾಗಿಯೂ ಅಲ್ಲಾಹು ಎಲ್ಲ ಪಾಪಗಳನ್ನೂ ಕ್ಷಮಿಸುತ್ತಾನೆ. ಖಂಡಿತವಾಗಿಯೂ ಅವನು ಅತ್ಯಧಿಕ ಕ್ಷಮಿಸುವವನೂ ಅಪಾರ ಕರುಣೆಯುಳ್ಳವನೂ ಆಗಿದ್ದಾನೆ. ನಿಮ್ಮ ಮೇಲೆ ಶಿಕ್ಷೆ ಎರಗುವುದಕ್ಕೆ ಮುಂಚಿತವಾಗಿ ನಿಮ್ಮ ಪ್ರಭುವಿನೆಡೆಗೆ ಪಶ್ಚಾತ್ತಾಪದೊಂದಿಗೆ ಮರಳಿರಿ ಮತ್ತು ಅವನಿಗೆ ಶರಣಾಗತರಾಗಿರಿ. (ಅನ್ಯಥಾ) ತರುವಾಯ ನಿಮಗೆ ಸಹಾಯ ಲಭ್ಯವಾಗದು."** [ಕುರ್‌ಆನ್ 39/53–54]

﴿ وَمَن يَغْفِرُ ٱلذُّنُوبَ إِلَّا ٱللَّهُ ﴾

**"ಅಲ್ಲಾಹನ ಹೊರತು ಪಾಪಗಳನ್ನು ಕ್ಷಮಿಸುವವರು ಯಾರಾದರೂ ಇದ್ದಾರೆಯೇ?"** [ಕುರ್‌ಆನ್ 3/135]

ಎಂಬ ಅಲ್ಲಾಹನ ಪ್ರಶ್ನೆ ಪಾಪಿಯಾದ ಯಾವುದೇ ಮನುಷ್ಯನಲ್ಲೂ ನಿರೀಕ್ಷೆ ಮತ್ತು ಸಾಂತ್ವನವನ್ನು ಹುಟ್ಟಿಸುತ್ತದೆ. ಪಶ್ಚಾತ್ತಾಪಪಡುವವರನ್ನು ಅಲ್ಲಾಹು ಇಷ್ಟಪಡುತ್ತಾನೆ. ಪಾಪಗಳನ್ನು ಕ್ಷಮಿಸುವುದು ಅವನಿಗೆ ಅತ್ಯಂತ ಇಷ್ಟಕರವಾಗಿದೆ. ಪಾಪ ಪ್ರಜ್ಞೆಯನ್ನು ಹೊಂದಿರುವ ಮತ್ತು ಪಶ್ಚಾತ್ತಾಪಪಡುವ ದಾಸನೋರ್ವನ ಯಾವುದೇ ಪಾಪವನ್ನೂ ಪರಮ ದಯಾಮಯನೂ ಕರುಣಾಮಯಿಯೂ ಆಗಿರುವ ಅಲ್ಲಾಹು ಕ್ಷಮಿಸುತ್ತಾನೆ. ಅದಕ್ಕೆ ಇತರರ ಮಧ್ಯಸ್ಥಿಕೆ ಬೇಕಾಗಿಲ್ಲ; ಶಿಫಾರಸ್ಸೂ ಬೇಕಾಗಿಲ್ಲ.

ಓರ್ವನ ದೋಷಫಲವನ್ನು ಇನ್ನೋರ್ವನು ಹೊರಬೇಕೆಂಬ ಅನ್ಯಾಯ ಅಲ್ಲಾಹನ ಬಳಿ ಒಮ್ಮೆಯೂ ಉಂಟಾಗಲು ಸಾಧ್ಯವಿಲ್ಲ. ದೇವನ ಮುಂದೆ ಹೊರತು ಅನ್ಯರ ಮುಂದೆ ಎಂದೂ ತಪ್ಪೊಪ್ಪಿಕೊಳ್ಳಬೇಕಾಗಿಲ್ಲ. ಹಾಗೆ ತಪ್ಪೊಪ್ಪಿಯೂ ಪ್ರಯೋಜನವಿಲ್ಲ. ತಂದೆಯ ಪಾಪ ಮಗನಿಗೆ ಅಥವಾ ಮಗನ ಪಾಪ ತಂದೆಗೆ ವರ್ಗಾವಣೆಯಾಗುವುದಿಲ್ಲ. ಆದಿಪಿತನ ಪಾಪಫಲವನ್ನು ಮಾನವಕುಲ ಸಂಪೂರ್ಣವಾಗಿ ವಹಿಸಬೇಕೆಂಬ ತತ್ವವನ್ನು ಇಸ್ಲಾಮ್ ಪ್ರಬಲವಾಗಿ ನಿರಾಕರಿಸುತ್ತದೆ. ಮನುಷ್ಯನ ಪಾಪ ಪರಿಹಾರಕ್ಕಾಗಿ ದೇವನು ಮನುಷ್ಯಾವತಾರ ತಳೆದು ಸ್ವತಃ ತನ್ನನ್ನು ಬಲಿ ನೀಡಬೇಕಾದ ಯಾವುದೇ ಅಗತ್ಯವೂ ಇಲ್ಲ. ಪಾಪಿಯ ಮನಸ್ಸು ಶುದ್ಧೀಕರಣಗೊಂಡು ಅವನು ತನ್ನ ಪಾಪದ ಬಗ್ಗೆ ಪ್ರಾಮಾಣಿಕವಾಗಿ ವಿಷಾದಿಸಿ ತಾನದನ್ನು ಎಂದೂ ಪುನರಾವರ್ತಿಸುವುದಿಲ್ಲವೆಂದು ಪ್ರತಿಜ್ಞೆಗೈದರೆ ಮನುಷ್ಯ ಮನಸ್ಸುಗಳ ಸೂಕ್ಷ್ಮ ಚಲನೆಗಳನ್ನು ಕೂಡ ಅರಿತುಕೊಳ್ಳುವ ಸಾಮರ್ಥ್ಯವಿರುವ ಪರಮ ದಯಾಮಯ ಮತ್ತು ಕರುಣಾಮಯಿಯಾದ ಅಲ್ಲಾಹು ಅವನನ್ನು ಕ್ಷಮಿಸುವನು.

ಪಾಪಿಯು ತನ್ನ ಪಾಪವನ್ನು ತೊರೆದು ಪಶ್ಚಾತ್ತಾಪಪಟ್ಟು ಮರಳುವಾಗ ಅಲ್ಲಾಹನಿಗೆ ಉಂಟಾಗುವ ಪುಳಕವು ಎಷ್ಟು ಅಗಾಧವಾಗಿರುತ್ತದೆಂದು ಪ್ರವಾದಿ ಮುಹಮ್ಮದ್(ﷺ) ರವರು ತಮ್ಮ ಅನುಯಾಯಿಗಳಿಗೆ ಹೀಗೆ ವಿವರಿಸಿಕೊಡುತ್ತಾರೆ:

ಮರುಭೂಮಿಯಲ್ಲಿರುವ ಮರವೊಂದರ ನೆರಳಲ್ಲಿ ವಿಶ್ರಾಂತಿ ಪಡೆಯಲು ಮಲಗಿದ ದಾರಿಹೋಕನು ಆಳ ನಿದ್ದೆಗೆ ಜಾರಿದನು. ಎಚ್ಚೆತ್ತು ನೋಡಿದಾಗ ತನ್ನ ಒಂಟೆ ಕಾಣುತ್ತಿಲ್ಲ. ಅವನ ಆಹಾರ ಪಾನೀಯಗಳು ಹಾಗೂ ಇನ್ನಿತರ ಸಾಮಗ್ರಿಗಳನ್ನು ಅದರ ಬೆನ್ನ ಮೇಲೆ ಹೊರಿಸಲಾಗಿತ್ತು. ತುದಿಯಿಲ್ಲದ ಮರುಭೂಮಿಯಲ್ಲಿ ಬಾಯಾರಿಕೆಯ ನೀರು ಕೂಡ ಕಳೆದುಕೊಂಡು, ಏಕಾಂಗಿಯಾಗಿ ಕಳೆಯಬೇಕಾದ ಸ್ಥಿತಿಯನ್ನು ಸ್ಮರಿಸಿ ವಿಭ್ರಾಂತನಾಗಿ ಕುಳಿತ ಆ ವ್ಯಕ್ತಿಯ ಮುಂದೆ ಅಗೋ ಅವನ ಒಂಟೆ ಪ್ರತ್ಯಕ್ಷವಾಗುತ್ತದೆ! ಆಹಾರ ಪಾನೀಯಗಳೆಲ್ಲವೂ ಅದರ ಬೆನ್ನ ಮೇಲೆ ಹಾಗೆಯೇ ಇದೆ! ಕಳೆದುಹೋದ ತನ್ನ ಒಂಟೆ ಮರಳಿ ದೊರೆತಾಗ ಅವನಿಗೆ ಎಷ್ಟು ಸಂತಸವುಂಟಾಗಬಹುದೋ ಅದಕ್ಕಿಂತಲೂ ಅನೇಕ ಪಟ್ಟು ಹೆಚ್ಚು ಸಂತಸ ಪಾಪಿಯಾದ ಮನುಷ್ಯನು ಪಶ್ಚಾತ್ತಾಪಪಡುವಾಗ ಅಲ್ಲಾಹನಿಗೆ ಉಂಟಾಗುತ್ತದೆಂದು ಪ್ರವಾದಿ ಮುಹಮ್ಮದ್(ﷺ)ರವರು ಹೇಳಿದರು.

ಅಲ್ಲಾಹನ ಕರುಣೆಯ ಬಗ್ಗೆ ಮತ್ತು ಪಾಪಿಗಳಿಗೆ ಅವನು ನೀಡುವ ಕ್ಷಮೆಯ

ಬಗ್ಗೆ ಕುರ್‌ಆನ್ ಮತ್ತು ಅದರ ಅಧಿಕೃತ ವ್ಯಾಖ್ಯಾನಕಾರರಾದ ಮುಹಮ್ಮದ್(ﷺ) ರವರು ಪದೇ ಪದೇ ಪುನರಾವರ್ತಿಸುತ್ತಾ ಒತ್ತು ಕೊಟ್ಟು ಕಲಿಸಿರುತ್ತಾರೆ. ಪರಮ ದಯಾಮಯ, ಪರಮ ಕರುಣೆಯುಳ್ಳವನು, ಕ್ಷಮೆ ನೀಡುವವನು, ಮನ್ನಿಸುವವನು, ವಿನಾಯಿತಿ ನೀಡುವವನು, ಸೌಮ್ಯನು, ವಿಶಾಲನು, ಉದಾರಿ.. ಹೀಗೆ ಹತ್ತುಹಲವು ಸ್ಥಳಗಳಲ್ಲಿ ಆದರಣೀಯ ಕುರ್‌ಆನ್ ಅಲ್ಲಾಹನನ್ನು ಪರಿಚಯಿಸುತ್ತದೆ.

## ಕರ್ಮಫಲ

ಆದರೆ ಒಳಿತು-ಕೆಡುಕು, ಸತ್ಯ-ಅಸತ್ಯ, ನ್ಯಾಯ-ಅನ್ಯಾಯ, ಧರ್ಮ-ಅಧರ್ಮ ಇತ್ಯಾದಿಗಳನ್ನು ಅಲ್ಲಾಹನ ದಯೆ ಸಮಾನವಾಗಿ ಪರಿಗಣಿಸುತ್ತದೆ ಎಂದು ಭಾವಿಸಕೂಡದು. ಧಾರ್ಮಿಕ ಮೌಲ್ಯಗಳು ಸಾರ್ಥಕವಾಗಲು ಒಳಿತಿಗೆ ಉತ್ತಮ ಪ್ರತಿಫಲ ಮತ್ತು ಕೆಡುಕಿಗೆ ತಕ್ಕ ಶಿಕ್ಷೆ ಇರಲೇಬೇಕಾದುದು ಅತ್ಯಗತ್ಯವಾಗಿದೆ.

﴿ وَلِلَّهِ مَا فِي ٱلسَّمَٰوَٰتِ وَمَا فِي ٱلْأَرْضِ لِيَجْزِيَ ٱلَّذِينَ أَسَٰٓـُٔواْ بِمَا عَمِلُواْ وَيَجْزِيَ ٱلَّذِينَ أَحْسَنُواْ بِٱلْحُسْنَى ٣١ ﴾

**"ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವವುಗಳು ಅಲ್ಲಾಹನದ್ದಾಗಿವೆ. ಪಾಪ ಮಾಡಿದವರಿಗೆ ಅವರು ಮಾಡಿರುವ ಕರ್ಮಗಳಿಗೆ ತಕ್ಕ ಪ್ರತಿಫಲ ನೀಡುವ ಸಲುವಾಗಿ ಮತ್ತು ಒಳಿತೆಸಗಿದವರಿಗೆ ಅತ್ಯುತ್ತಮವಾಗಿರುವುದರ ಮೂಲಕ ಪ್ರತಿಫಲ ನೀಡುವ ಸಲುವಾಗಿ."** [ಕುರ್‌ಆನ್ 53/31]

ಶಿಕ್ಷೆ-ರಕ್ಷೆ ನೀಡುವ ನೀತಿವಂತ ಮತ್ತು ಕರುಣಾಮಯಿಯಾದ ಅಲ್ಲಾಹು ತನ್ನ ಅಪಾರ ಕರುಣೆಯ ಫಲವಾಗಿ ಮರಣಾನಂತರ ಅಂತ್ಯದಿನದಂದು ಮನುಷ್ಯರೆಲ್ಲರನ್ನೂ ಪುನರುತ್ಥಾನಗೊಳಿಸುವನು. ಅವನು ಮನುಷ್ಯನಿಗೆ ಶಾಶ್ವತವಾದ ಆತ್ಮವನ್ನು ನೀಡಿದ್ದಾನೆ. ಅಂತ್ಯದಿನದಂದು ಎಲ್ಲವೂ ನಾಶವಾಗಿ, ಅವನ ಅಪ್ಪಣೆಯೊಂದಿಗೆ ಮೊಟ್ಟಮೊದಲ ಮನುಷ್ಯನಿಂದ ತೊಡಗಿ ಕಟ್ಟಕಡೆಯ ಮನುಷ್ಯನವರೆಗೆ -ಒಬ್ಬನೂ ಬಾಕಿಯಾಗದ ರೀತಿಯಲ್ಲಿ- ಎಲ್ಲರನ್ನೂ ಭೂಮಿಯಿಂದ ಶರೀರದೊಂದಿಗೇ ಎಬ್ಬಿಸುವನು. ದೇವವಿಶ್ವಾಸಿಗಳ ಪೈಕಿ ಅಧಿಕ ಮಂದಿಯೂ ಅಲ್ಲಾಹನ ಈ ಸಾಮರ್ಥ್ಯವನ್ನು ನಿಷೇಧಿಸುತ್ತಾರೆ.

ಖಂಡಿತವಾಗಿಯೂ ಅಲ್ಲಾಹು ಮನುಷ್ಯರೆಲ್ಲರನ್ನೂ ಮರಣಾನಂತರ ಶರೀರದೊಂದಿಗೇ ಪುನರುತ್ಥಾನಗೊಳಿಸುವನು ಮತ್ತು ಅವರೆಲ್ಲರನ್ನೂ ಪರಲೋಕದಲ್ಲಿ

ಒಟ್ಟುಗೂಡಿಸಿ ಅವರ ಕರ್ಮಗಳಿಗೆ ಅನುಗುಣವಾಗಿ ಪ್ರತಿಫಲ ನೀಡುವನು ಎಂದು ಕುರ್‌ಆನ್ ಪದೇ ಪದೇ ಮನುಷ್ಯರಿಗೆ ಬೋಧನೆ ನೀಡುತ್ತದೆ.

﴿ ٱللَّهُ لَآ إِلَٰهَ إِلَّا هُوَۚ لَيَجۡمَعَنَّكُمۡ إِلَىٰ يَوۡمِ ٱلۡقِيَٰمَةِ لَا رَيۡبَ فِيهِۗ وَمَنۡ أَصۡدَقُ مِنَ ٱللَّهِ حَدِيثٗا ٨٧ ﴾

**“ಅಲ್ಲಾಹನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ಖಂಡಿತವಾಗಿಯೂ ಅವನು ಅಂತ್ಯದಿನದಂದು ನಿಮ್ಮನ್ನು ಒಟ್ಟುಗೂಡಿಸುವನು. ಅದರಲ್ಲಿ ಯಾವುದೇ ಸಂದೇಹವೂ ಇಲ್ಲ. ಮಾತಿನಲ್ಲಿ ಅಲ್ಲಾಹನಿಗಿಂತಲೂ ಹೆಚ್ಚು ಸತ್ಯಸಂಧನಾಗಿರುವವನು ಯಾರಿದ್ದಾನೆ?”** [ಕುರ್‌ಆನ್ 4/87]

ಹೀಗೆ ಮನುಷ್ಯರನ್ನು ಮತ್ತು ಜಿನ್ನ್‌ಗಳನ್ನು[3] ಪರಲೋಕದಲ್ಲಿ ಒಟ್ಟುಗೂಡಿಸಿ ಒಳಿತಿಗೆ ಮತ್ತು ಕೆಡುಕಿಗೆ ಅದಕ್ಕನುಸಾರವಾಗಿ ಪ್ರತಿಫಲ ನೀಡುವನು. ಒಳಿತಿನ ಪ್ರತಿಫಲ ಹಲವು ಪಟ್ಟು ದುಪ್ಪಟ್ಟಾಗಿರುವುದು ಮತ್ತು ಮನುಷ್ಯನು ಭಾವಿಸುವುದೆಲ್ಲಕ್ಕಿಂತಲೂ ಅತಿ ಮಹೋನ್ನತವಾಗಿರುವುದು.

## ಇನ್ನು ನಾವು ಚಿಂತಿಸೋಣ

ಜಗತ್ತಿನ ಸೃಷ್ಟಿಕರ್ತ ಮತ್ತು ಪರಿಪಾಲಕ ಏಕೈಕನಾಗಿದ್ದಾನೆ. ಎಲ್ಲವೂ ಅವನ ನಿಯಂತ್ರಣದಲ್ಲಿದೆ. ಅವನು ಎಲ್ಲ ಸಮಯಗಳಲ್ಲೂ ಗಮನಿಸುತ್ತಲೇ ಇರುತ್ತಾನೆ. ನಿದ್ದೆ, ತೂಕಡಿಕೆಗಳಿಲ್ಲದೆ ಪೂರ್ಣ ಎಚ್ಚರವಾಗಿದ್ದಾನೆ. ಯಾವುದೇ ಕಟ್ಟಿರುಳಿನಲ್ಲಿಯೂ ಜಗತ್ತಿನ ಯಾವುದೇ ಮೂಲೆಯಲ್ಲಿ ಜರಗುವ ಸೂಕ್ಷ್ಮವಾದ ಚಲನೆಯನ್ನು ಕೂಡ ಅವರು ಕಾಣುತ್ತಾನೆ, ಆಲಿಸುತ್ತಾನೆ ಮತ್ತು ಅರಿಯುತ್ತಾನೆ. ವಿಷಯಗಳನ್ನು ಮನದಟ್ಟು ಮಾಡಿಕೊಡಲು ಅವನಿಗೆ ಓರ್ವ ಶಿಫಾರಸ್ಸು ಮಾಡುವವನ ಅಥವಾ ಉಪದೇಶ ನೀಡುವವನ ಅಗತ್ಯವಿಲ್ಲ. ಮಾತ್ರವಲ್ಲ, ಅವನು ಸೃಷ್ಟಿಗಳೊಂದಿಗೆ ಅತೀವ ದಯೆ ಮತ್ತು ಕರುಣೆಯನ್ನು ಹೊಂದಿದ್ದಾನೆ. ಜಗತ್ತಿನಲ್ಲಿ ಯಾರಿಗೂ ಕೂಡ ಅವನ ಕರುಣೆಯ ಅಥವಾ ಕೃಪೆಯ ಚಿಕ್ಕ ಅಂಶ ಕೂಡ ಇಲ್ಲ.

ಹಾಗಿರುವ ಜಗದೊಡೆಯನೊಂದಿಗೆ ನೇರವಾಗಿ ಪ್ರಾರ್ಥನೆ ಮಾಡದೆ, ನಡುವೆ

---

3. **ಜಿನ್ನ್:** ಅಗ್ನಿಯಿಂದ ಸೃಷ್ಟಿಸಲಾದ ಅಗೋಚರ ಜೀವಿಗಳು. ಮನುಷ್ಯರಂತೆಯೇ ಇವರಿಗೂ ಕೂಡ ಒಳಿತು ಮತ್ತು ಕೆಡುಕು ಮಾಡುವ ಸ್ವಾತಂತ್ರ್ಯ ನೀಡಲಾಗಿದೆ. ಮನುಷ್ಯರಂತೆಯೇ ಅಂತ್ಯದಿನದಂದು ಇವರನ್ನೂ ವಿಚಾರಣೆಗೊಳಪಡಿಸಲಾಗುತ್ತದೆ.

ಓರ್ವ ಮಧ್ಯವರ್ತಿಯನ್ನಿಟ್ಟು ಶಿಫಾರಸ್ಸು ಬೇಡುವುದು ಅವನಲ್ಲಿ ಅವಿಶ್ವಾಸವಿಡುವುದೇ ಅಲ್ಲವೇ? ಅವನ ಪ್ರೀತಿ ಮತ್ತು ಕರುಣೆಯನ್ನು ಅಪಮಾನ ಮಾಡುವುದಲ್ಲವೇ? ಅವನನ್ನು ಕ್ರೂರ, ಕಠೋರ ಮತ್ತು ಭಯಾನಕವೆಂದು ಗಣಿಸುವುದಲ್ಲವೇ?

﴿ وَمَا قَدَرُوا۟ ٱللَّهَ حَقَّ قَدْرِهِۦٓ ﴾

**“ಅಲ್ಲಾಹುವನ್ನು ಗಣಿಸಬೇಕಾದ ರೀತಿಯಲ್ಲಿ ಅವರು ಗಣಿಸಲಿಲ್ಲ.”** (ಕುರ್‌ಆನ್ 6/91)

ಎಂಬ ಕುರ್‌ಆನಿನ ಆಕ್ಷೇಪ ಎಷ್ಟು ಸತ್ಯ!

ಕೆಳಗಿನ ಕುರ್‌ಆನ್ ವಚನಗಳನ್ನು ಗಮನಿಸಿ:

﴿ وَإِذَا سَأَلَكَ عِبَادِى عَنِّى فَإِنِّى قَرِيبٌ ۖ أُجِيبُ دَعْوَةَ ٱلدَّاعِ إِذَا دَعَانِ ۖ فَلْيَسْتَجِيبُوا۟ لِى وَلْيُؤْمِنُوا۟ بِى لَعَلَّهُمْ يَرْشُدُونَ ﴿١٨٦﴾ ﴾

**“(ಓ ಪ್ರವಾದಿಯವರೇ!) ನನ್ನ ದಾಸರು ತಮ್ಮೊಂದಿಗೆ ನನ್ನ ಬಗ್ಗೆ ವಿಚಾರಿಸಿದರೆ ನಾನು ಅತ್ಯಂತ ಸಮೀಪದಲ್ಲಿರುವೆನು (ಎಂದು ಹೇಳಿರಿ); ಪ್ರಾರ್ಥಿಸುವವನು ನನ್ನೊಂದಿಗೆ ಪ್ರಾರ್ಥಿಸಿದರೆ ನಾನು ಅವನ ಪ್ರಾರ್ಥನೆಗೆ ಉತ್ತರ ನೀಡುವೆನು. ಆದ್ದರಿಂದ ಅವರು ನನ್ನ ಆಹ್ವಾನವನ್ನು ಸ್ವೀಕರಿಸಲಿ ಮತ್ತು ನನ್ನಲ್ಲಿ ವಿಶ್ವಾಸವಿಡಲಿ. ಅವರು ಸನ್ಮಾರ್ಗಪಡೆಯಲೂ ಬಹುದು.”** [ಕುರ್‌ಆನ್ 2/186]

﴿ وَلَقَدْ خَلَقْنَا ٱلْإِنسَٰنَ وَنَعْلَمُ مَا تُوَسْوِسُ بِهِۦ نَفْسُهُۥ ۖ وَنَحْنُ أَقْرَبُ إِلَيْهِ مِنْ حَبْلِ ٱلْوَرِيدِ ﴿١٦﴾ ﴾

**“ಖಂಡಿತವಾಗಿಯೂ ನಾವು ಮನುಷ್ಯನನ್ನು ಸೃಷ್ಟಿಸಿದ್ದೇವೆ. ಅವನ ಮನಸ್ಸು ಅವನೊಂದಿಗೆ ಏನನ್ನು ಪಿಸುಗುಡುತ್ತದೆಯೆಂದೂ ನಾವು ಅರಿಯುತ್ತೇವೆ. ಅವನ ಕಂಠನಾಡಿಗಿಂತಲೂ ನಾವು ಅವನಿಗೆ ಹತ್ತಿರದಲ್ಲಿದ್ದೇವೆ.”** [ಕುರ್‌ಆನ್ 50/16]

﴿ وَيَعْبُدُونَ مِن دُونِ ٱللَّهِ مَا لَا يَضُرُّهُمْ وَلَا يَنفَعُهُمْ وَيَقُولُونَ

هَٰٓؤُلَآءِ شُفَعَٰٓؤُنَا عِندَ ٱللَّهِۚ قُلۡ أَتُنَبِّـُٔونَ ٱللَّهَ بِمَا لَا يَعۡلَمُ فِي ٱلسَّمَٰوَٰتِ وَلَا فِي ٱلۡأَرۡضِۚ ﴾

**“ಅವರಿಗೆ ಉಪಕಾರವಾಗಲಿ, ಹಾನಿಯಾಗಲಿ ಮಾಡದ ಅಲ್ಲಾಹನ ಹೊರತಾದವರನ್ನು ಅವರು ಆರಾಧಿಸುತ್ತಿದ್ದಾರೆ ಮತ್ತು ಇವರು ಅಲ್ಲಾಹನ ಬಳಿ ನಮ್ಮ ಶಿಫಾರಸ್ಸುಗಾರರಾಗಿದ್ದಾರೆ ಎಂದು ಅವರು ಹೇಳುತ್ತಾರೆ. (ಓ ಪ್ರವಾದಿಯವರೇ!) ಕೇಳಿರಿ: ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿ ಅಲ್ಲಾಹನಿಗೆ ತಿಳಿದಿರದ ಮಾಹಿತಿಗಳನ್ನು ನೀವು ಅವನಿಗೆ ತಿಳಿಸಿಕೊಡುತ್ತಿರುವಿರಾ?”** [ಕುರ್‌ಆನ್ 10/18]

ನೈಜ ಆರಾಧ್ಯನಾಗಿರುವ ಅಲ್ಲಾಹನೆಡೆಗೆ ಮಧ್ಯವರ್ತಿಗಳನ್ನು ಸ್ಥಾಪಿಸುವುದರಿಂದಲೂ ಅವನ ಹೊರತು ಅನ್ಯ ಆರಾಧ್ಯರನ್ನು ಆರಾಧಿಸುವುದು ಮತ್ತು ಅವರೊಂದಿಗೆ ಪ್ರಾರ್ಥಿಸುವುದು ದೊಡ್ಡ ಅಪರಾಧವಾಗಿದೆ. ಅಲ್ಲಾಹನ ವಿಶೇಷಣಗಳನ್ನು ಇತರರಿಗೆ ನೀಡುವುದು ಮತ್ತು ಅಲ್ಲಾಹನ ಹೊರತು ಇತರರೊಂದಿಗೆ ಪ್ರಾರ್ಥಿಸುವುದು ಇಸ್ಲಾಮಿನ ಏಕದೇವವಿಶ್ವಾಸಕ್ಕೆ ವಿರುದ್ಧವಾಗಿದೆ. ಅದು ಅಲ್ಲಾಹನೊಂದಿಗೆ ಪಾಲುದಾರರನ್ನು ಕಲ್ಪಿಸುವುದಾಗಿದೆ. ಇದನ್ನೇ ಪಾರಿಭಾಷಿಕವಾಗಿ ‘ಶಿರ್ಕ್’ ಎನ್ನಲಾಗುತ್ತದೆ. ಸೃಷ್ಟಿಕರ್ತ, ಪರಿಪಾಲಕ ಇತ್ಯಾದಿ ಇತ್ಯಾದಿ ಕೇವಲ ಅಲ್ಲಾಹು ಮಾತ್ರ ಎಂದು ನಂಬಿದರೆ ಸಾಲದು. ಅದಕ್ಕೆ ಅನುಬಂಧಿತವಾಗಿ ಪ್ರಾರ್ಥನೆ, ಆರಾಧನೆ, ಭಯಭಕ್ತಿ ಇತ್ಯಾದಿಗಳನ್ನು ಅಲ್ಲಾಹನಿಗೆ ಮಾತ್ರ ಸಲ್ಲಿಸಬೇಕು. ಎಲ್ಲ ಕಾಲಗಳಲ್ಲೂ ಜನರಿಗೆ ಸಂಭವಿಸಿದ ಪ್ರಮಾದ ಇದೇ ಆಗಿದೆ. ಸೃಷ್ಟಿಕರ್ತ, ಪರಿಪಾಲಕ ಕೇವಲ ಅಲ್ಲಾಹು ಮಾತ್ರವೆಂದು ಪ್ರವಾದಿ ಮುಹಮ್ಮದ್(ﷺ)ರವರ ಕಾಲದ ಮಕ್ಕಾ ನಿವಾಸಿಗಳೂ ನಂಬಿದ್ದರು. ಆದರೆ ಆರಾಧನೆ, ಪ್ರಾರ್ಥನೆ ಇತ್ಯಾದಿಗಳನ್ನು ಅವರು ಅಲ್ಲಾಹೇತರರಿಗೂ ಸಲ್ಲಿಸುತ್ತಿದ್ದರು. ಅಲ್ಲಾಹೇತರರಿಗೆ ಆರಾಧನೆ, ಪ್ರಾರ್ಥನೆ ಇತ್ಯಾದಿಗಳನ್ನು ಸಲ್ಲಿಸುವುದು ಅವರನ್ನು ಅಲ್ಲಾಹನೊಂದಿಗೆ ಪಾಲುದಾರರನ್ನಾಗಿ ಮಾಡುವುದಾಗಿದೆ.

ಶಿರ್ಕಿನಿಂದ ಅಂದರೆ ಅಲ್ಲಾಹನೊಂದಿಗೆ ಇತರರನ್ನು ಪಾಲುದಾರರನ್ನಾಗಿ ಮಾಡುವುದರಿಂದ ಮುಕ್ತನಾಗದೆ ಓರ್ವ ವ್ಯಕ್ತಿ ಎಷ್ಟೇ ಉತ್ತಮ ಕರ್ಮವೆಸಗಿದರೂ, ಸಮಾಜ ಕಲ್ಯಾಣ ಕಾರ್ಯವೆಸಗಿದರೂ ಪ್ರಯೋಜನವಿಲ್ಲ. ಮನುಷ್ಯನ ಅತಿದೊಡ್ಡ ಹೊಣೆ ತನ್ನ ಸೃಷ್ಟಿಕರ್ತ ಮತ್ತು ಪರಿಪಾಲಕನಾದ ಅಲ್ಲಾಹನನ್ನು ಮಾತ್ರ ಆರಾಧಿಸುವುದಾಗಿದೆ. ಅವನ ಮೇಲಿರುವ ವಿಶ್ವಾಸ ಮತ್ತು ಅವನಿಗಾಗಿರುವ ಆದ್ಯತೆ ನಿಷ್ಕಳಂಕವಾಗಿರಬೇಕು. ಅವನ ಹಕ್ಕು, ಅಧಿಕಾರಗಳನ್ನು ಇತರ ಯಾರಿಗೂ ನೀಡಕೂಡದು. ಇದು ಮನುಷ್ಯನ ಪ್ರಾಥಮಿಕ ಕರ್ತವ್ಯವಾಗಿದೆ. ಇದನ್ನು ಮಾಡದೆ ಶಿರ್ಕ್ ಮಾಡುತ್ತಾ ಜೀವಿಸಿದರೆ ಅವನು ಏನೇ ಸತ್ಕರ್ಮವೆಸಗಿದರೂ ಅಲ್ಲಾಹು ಅದನ್ನು ಸ್ವೀಕರಿಸುವುದಿಲ್ಲ. ಈ ಕೆಳಗಿನ

ವಚನಗಳನ್ನು ನೋಡಿರಿ:

﴿ ٱللَّهُ خَٰلِقُ كُلِّ شَيْءٖۖ وَهُوَ عَلَىٰ كُلِّ شَيْءٖ وَكِيلٞ ٦٢ لَّهُۥ مَقَالِيدُ ٱلسَّمَٰوَٰتِ وَٱلْأَرْضِۗ وَٱلَّذِينَ كَفَرُواْ بِـَٔايَٰتِ ٱللَّهِ أُوْلَٰٓئِكَ هُمُ ٱلْخَٰسِرُونَ ٦٣ قُلْ أَفَغَيْرَ ٱللَّهِ تَأْمُرُوٓنِّيٓ أَعْبُدُ أَيُّهَا ٱلْجَٰهِلُونَ ٦٤ وَلَقَدْ أُوحِيَ إِلَيْكَ وَإِلَى ٱلَّذِينَ مِن قَبْلِكَ لَئِنْ أَشْرَكْتَ لَيَحْبَطَنَّ عَمَلُكَ وَلَتَكُونَنَّ مِنَ ٱلْخَٰسِرِينَ ٦٥ بَلِ ٱللَّهَ فَٱعْبُدْ وَكُن مِّنَ ٱلشَّٰكِرِينَ ٦٦ وَمَا قَدَرُواْ ٱللَّهَ حَقَّ قَدْرِهِۦ وَٱلْأَرْضُ جَمِيعٗا قَبْضَتُهُۥ يَوْمَ ٱلْقِيَٰمَةِ وَٱلسَّمَٰوَٰتُ مَطْوِيَّٰتُۢ بِيَمِينِهِۦۚ سُبْحَٰنَهُۥ وَتَعَٰلَىٰ عَمَّا يُشْرِكُونَ ٦٧ ﴾

“ಅಲ್ಲಾಹು ಎಲ್ಲ ವಸ್ತುಗಳ ಸೃಷ್ಟಿಕರ್ತನಾಗಿದ್ದಾನೆ. ಅವನು ಎಲ್ಲ ವಸ್ತುಗಳ ಮೇಲ್ನೋಟ ವಹಿಸುತ್ತಾನೆ. ಆಕಾಶಗಳ ಮತ್ತು ಭೂಮಿಯ ಕೀಲಿಕೈಗಳು ಅವನ ವಶದಲ್ಲಿವೆ. ಅಲ್ಲಾಹನ ವಚನಗಳಲ್ಲಿ ಅವಿಶ್ವಾಸವಿಟ್ಟವರು ಯಾರೋ ಅವರೇ ನಷ್ಟಕ್ಕೀಡಾದವರು. (ಓ ಪ್ರವಾದಿಯವರೇ!) ಕೇಳಿರಿ: ಓ ಅಜ್ಞಾನಿಗಳೇ! ನಾನು ಅಲ್ಲಾಹೇತರರನ್ನು ಆರಾಧಿಸಬೇಕೆಂದು ನೀವು ನನ್ನೊಂದಿಗೆ ಹೇಳುತ್ತಿರುವಿರಾ? ತಾವು ಶಿರ್ಕ್ ಮಾಡಿದರೆ ತಮ್ಮ ಸತ್ಕರ್ಮಗಳು ನಿಷ್ಫಲವಾಗುತ್ತವೆ ಮತ್ತು ತಾವು ನಷ್ಟಕ್ಕೊಳಗಾದವರಲ್ಲಿ ಸೇರಿದವರಾಗುವಿರಿ ಎಂದು ತಮಗೂ ತಮ್ಮ ಮುಂಚಿನವರಿಗೂ ದಿವ್ಯಸಂದೇಶ ನೀಡಲಾಗಿದೆ. ಅಲ್ಲ, ತಾವು ಅಲ್ಲಾಹನನ್ನು ಮಾತ್ರ ಆರಾಧಿಸಿ ಕೃತಜ್ಞತೆ ಸಲ್ಲಿಸುವವರ ಪೈಕಿ ಸೇರಿದವರಾಗಿರಿ. ಅವರು ಅಲ್ಲಾಹನನ್ನು ಗಣಿಸಬೇಕಾದ ರೀತಿಯಲ್ಲಿ ಗಣಿಸಲಿಲ್ಲ. ಅಂತ್ಯದಿನದಂದು ಭೂಮಿ ಸಂಪೂರ್ಣವಾಗಿ ಅವನ ಹಿಡಿಯಲ್ಲಿರುವುದು. ಆಕಾಶಗಳು ಅವನ ಬಲಗೈಯಲ್ಲಿ ಒಂದು ಸುರುಳಿಯಾಗಿರುವುದು. ಅವರು ಸಹಭಾಗಿತ್ವ ಮಾಡುವುದರಿಂದೆಲ್ಲ ಅವನು ಪರಮಪಾವನನೂ ಅತ್ಯುನ್ನತನೂ ಆಗಿದ್ದಾನೆ.” [ಕುರ್‌ಆನ್ 39/62–67]

﴿ إِنَّ ٱللَّهَ لَا يَغْفِرُ أَن يُشْرَكَ بِهِۦ وَيَغْفِرُ مَا دُونَ ذَٰلِكَ لِمَن يَشَآءُۚ وَمَن يُشْرِكْ بِٱللَّهِ فَقَدِ ٱفْتَرَىٰٓ إِثْمًا عَظِيمًا ٤٨ ﴾

“ಖಂಡಿತವಾಗಿಯೂ ತನ್ನೊಂದಿಗೆ ಶಿರ್ಕ್ ಮಾಡಲಾಗುವುದನ್ನು ಅಲ್ಲಾಹು

**ಕ್ಷಮಿಸುವುದಿಲ್ಲ. ಅದರ ಹೊರತಾಗಿರುವುದನ್ನು ಅವನಿಚ್ಛಿಸುವವರಿಗೆ ಅವನು ಕ್ಷಮಿಸುತ್ತಾನೆ. ಯಾರು ಅಲ್ಲಾಹನೊಂದಿಗೆ ಶಿರ್ಕ್ ಮಾಡುತ್ತಾನೋ ಅವನು ಅತಿಭೀಕರವಾದ ಪಾಪವನ್ನು ಹೆಣೆದವನಾಗಿದ್ದಾನೆ."** [ಕುರ್‌ಆನ್ 4/48]

ಕೊನೆಯದಾಗಿ, ಅಲ್ಲಾಹನ ಉತ್ತಮವಾದ ನಾಮವಿಶೇಷಣಗಳನ್ನು ಪ್ರಕೀರ್ತಿಸುವ ಕೆಲವು ಕುರ್‌ಆನ್ ವಚನಗಳನ್ನು ನೀಡಿ ನಾನು ಕೊನೆಗೊಳಿಸುತ್ತಿದ್ದೇನೆ.

﴿ هُوَ ٱللَّهُ ٱلَّذِى لَآ إِلَٰهَ إِلَّا هُوَ ۖ عَٰلِمُ ٱلْغَيْبِ وَٱلشَّهَٰدَةِ ۖ هُوَ ٱلرَّحْمَٰنُ ٱلرَّحِيمُ ﴿٢٢﴾ هُوَ ٱللَّهُ ٱلَّذِى لَآ إِلَٰهَ إِلَّا هُوَ ٱلْمَلِكُ ٱلْقُدُّوسُ ٱلسَّلَٰمُ ٱلْمُؤْمِنُ ٱلْمُهَيْمِنُ ٱلْعَزِيزُ ٱلْجَبَّارُ ٱلْمُتَكَبِّرُ ۚ سُبْحَٰنَ ٱللَّهِ عَمَّا يُشْرِكُونَ ﴿٢٣﴾ هُوَ ٱللَّهُ ٱلْخَٰلِقُ ٱلْبَارِئُ ٱلْمُصَوِّرُ ۖ لَهُ ٱلْأَسْمَآءُ ٱلْحُسْنَىٰ ۚ يُسَبِّحُ لَهُۥ مَا فِى ٱلسَّمَٰوَٰتِ وَٱلْأَرْضِ ۖ وَهُوَ ٱلْعَزِيزُ ٱلْحَكِيمُ ﴿٢٤﴾ ﴾

**"ಅವನಾಗಿದ್ದಾನೆ ಅಲ್ಲಾಹು; ಅವನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ಅವನು ಅಗೋಚರ ಮತ್ತು ಗೋಚರವಾಗಿರುವುದನ್ನು ಅರಿಯುತ್ತಾನೆ. ಅವನು ಪರಮ ದಯಾಮಯನೂ ಕರುಣಾಮಯಿಯೂ ಆಗಿದ್ದಾನೆ. ಅವನಾಗಿದ್ದಾನೆ ಅಲ್ಲಾಹು. ಅವನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ಸಾಮ್ರಾಟನು, ಪವಿತ್ರನು, ನ್ಯೂನತೆಗಳಿಂದ ಮುಕ್ತವಾಗಿರುವವನು, ಸಂರಕ್ಷಣೆ ಒದಗಿಸುವವನು, ಮೇಲ್ನೋಟ ವಹಿಸುವವನು, ಅತಿಶಕ್ತನು, ಸರ್ವಾಧಿಕಾರಿ, ಮಹತ್ವವುಳ್ಳವನು. ಅವರು ಶಿರ್ಕ್ ಮಾಡುವುದರಿಂದೆಲ್ಲ ಅವನು ಪರಮ ಪಾವನನು. ಅವನಾಗಿದ್ದಾನೆ ಅಲ್ಲಾಹು; ಸೃಷ್ಟಿಕರ್ತ, ನಿರ್ಮಾತೃ, ರೂಪ ನೀಡುವವನು, ಅವನಿಗೆ ಅತ್ಯುತ್ಕೃಷ್ಟ ನಾಮಗಳಿವೆ. ಆಕಾಶಗಳಲ್ಲಿ ಮತ್ತು ಭೂಮಿಯಲ್ಲಿರುವುದೆಲ್ಲವೂ ಅವನ ಕೀರ್ತನೆ ಮಾಡುತ್ತವೆ. ಅವನು ಪ್ರತಾಪಶಾಲಿಯೂ ಯುಕ್ತಿಪೂರ್ಣನೂ ಆಗಿದ್ದಾನೆ."** [ಕುರ್‌ಆನ್ 59/22–24]

ಆರಾಧ್ಯನು ಅಲ್ಲಾಹು ಮಾತ್ರ. ಅವನ ಹೊರತು ಆರಾಧನೆಗೆ ನೈಜ ಹಕ್ಕುದಾರರಾಗಿ ಅನ್ಯರಿಲ್ಲ. ಅವನೊಂದಿಗೆ ಮಾತ್ರ ಪ್ರಾರ್ಥಿಸಿರಿ. ಅವನನ್ನು ಮಾತ್ರ ಆರಾಧಿಸಿರಿ.

وصلى الله على نبينا محمد وآله وصحبه وسلم

ಇಸ್ಲಾಮಿನ ಕುರಿತು ಮುಸ್ಲಿಮ್ ಮತ್ತು ಮುಸ್ಲಿಮೇತರರಲ್ಲಿರುವ
ತಪ್ಪುಕಲ್ಪನೆಗಳ ನಿವಾರಣೆಗಾಗಿ

# ಸತ್ಯ ಸಾರಥಿ

ಮಾಸಿಕ




**ಓದಿರಿ... ಪ್ರೋತ್ಸಾಹಿಸಿರಿ... ಚಂದಾದಾರರಾಗಿರಿ...**

**ಚಂದಾದರ ವಾರ್ಷಿಕ : ₹ 120.00**
**ಅರ್ಧವಾರ್ಷಿಕ : ₹ 60.00**

ಹೆಚ್ಚಿನ ಮಾಹಿತಿಗಳಿಗಾಗಿ ಸಂಪರ್ಕಿಸಿರಿ:

**ಸತ್ಯಸಾರಥಿ ಕನ್ನಡ ಮಾಸಿಕ,**
**14–37 ಜಿ(1), ವಿನಾಯಕ ಕಾಂಪ್ಲೆಕ್ಸ್,**
**ಕೈಕಂಬ, ಬಿ. ಸಿ. ರೋಡ್, ಬಂಟ್ವಾಳ ದ.ಕ.**
**ಮೊಬೈಲ್: 9632897299**
*email: satyasarathi2011@gmail.com*

# Manhaj-Al-Ambiya

Call & Guidance Centre ®

Mangalore

*Email : al.ambiya@gmail.com*

**ಪವಿತ್ರ ಕುರ್‌ಆನ್ ಮತ್ತು ಪ್ರವಾದಿ ಸುನ್ನತ್ ಆಧಾರಿತ ಪುಸ್ತಕಗಳಿಗೆ**

**ಮತ್ತು**

**ಇಸ್ಲಾಮಿಕ್ ಸಿಡಿ/ಡಿವಿಡಿಗಳಿಗೆ**

**ನಮ್ಮ ಈ ಕೆಳಗಿನ ಶಾಖೆಗೆ ಭೇಟಿ ನೀಡಿರಿ**

# CD/DVD & Book Store

Basement, Pioneer Complex, Near Masjid Ibrahim Al-Khaleel
Nellikai Road, Mangalore – 575001

**Telephone: (91) 824 244 3484**
**Mobile : 96110 71403**

*Email : iicmanglore@gmail.com*